ವಿಜಯಪುರ | ಸಂಪುಟ 04 | ಸಂಚಿಕೆ 190 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ರವಿವಾರ, ಸೆಪ್ಟೆಂಬರ್, 20, 2026

"ಈ ದೇಶದ ಭವಿಷ್ಯವು ಶಾಲಾ ಕೊಠಡಿಗಳಲ್ಲಿ ನಿರ್ಮಾಣವಾಗುತ್ತದೆ. ಶಾಲೆಯು ಜೀವಂತ ದೇವರುಗಳ ದೇವಾಲಯವಾಗಿದ್ದು ಇಂಥ ದೇಗುಲಗಳಲ್ಲಿ ಮಾತ್ರ ಮೌಲ್ಯಯುತ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಇದಕ್ಕೆ ಬಸವರಾಜ ಕೌಲಗಿ ಮಾದರಿಯಾಗಬಲ್ಲರು "



■ ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು
ಕರ್ನಾಟಕ ಬಾಲ ವಿಕಾಸ ಅಕಾಡೆಮಿ

# ಜನರ ಸಮಸ್ಯೆಗೆ ತಕ್ಷಣ ಸ್ಪಂದಿಸಿ, ಇಲ್ಲವೇ ಕ್ರಮ ಎದುರಿಸಿ

## ದೇವರಹಿಪ್ಪರಗಿ ಮತ್ತು ಸಿಂದಗಿಯಲ್ಲಿ ನಡೆದ ಪ್ರಜಾಸೇವಾ ಆಂದೋಲನ ಸಭೆಯಲ್ಲಿ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ ಸಚಿವ ಡಾ. ಎಂ.ಬಿ.ಪಾಟೀಲ

■ ಉದಯರಶ್ಮಿ ದಿನಪತ್ರಿಕೆ


ವಿಜಯಪುರ: ಪ್ರಜಾ ಸೇವಾ ಆಂದೋಲನದ ಮೂಲಕ ಸರಕಾರವೇ ಜನರ ಮನೆ ಬಾಗಿಲಿಗೆ ಬರುತ್ತಿದೆ. ಇದು ಇಡೀ ದೇಶದಲ್ಲೇ ವಿನೂತನ ಪ್ರಯೋಗವಾಗಿದೆ. ಆದ್ದರಿಂದ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಸಲ್ಲಿಕೆಯಾಗುವ ಎಲ್ಲ ಅರ್ಜಿಗಳಿಗೆ ಅಧಿಕಾರಿಗಳು ಸಕಾಲದಲ್ಲಿ ಸ್ಪಂದಿಸಬೇಕು. ಇಲ್ಲವಾದಲ್ಲಿ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ. ಪಾಟೀಲ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ತಾಲೂಕ ಆಡಳಿತ, ತಾಲೂಕು ಪಂಚಾಯತಿ ಸಹಯೋಗದಲ್ಲಿ ದೇವರಹಿಪ್ಪರಗಿ ಪಟ್ಟಣದ ವಿಜಯಪುರ ರಸ್ತೆಯ ನೂತನ ತಹಶೀಲ್ದಾರ್ ಕಚೇರಿಗೆ ಕಾಯ್ದಿರಿಸಿದ ಸ್ಥಳದಲ್ಲಿ ಶನಿವಾರ 8.60 ಕೋಟಿ ರೂ. ವೆಚ್ಚದ ಎರಡಂತಸ್ತಿನ ನೂತನ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಸಮಾರಂಭ ಹಾಗೂ ಪ್ರಜಾ ಸೇವೆ ಆಂದೋಲನ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಸಲ್ಲಿಕೆಯಾಗಿರುವ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿಯೇ ನಿಮ್ಮ ಹಂತದಲ್ಲಿರುವ ಅರ್ಜಿಗಳಿಗೆ ಸ್ಪಂದಿಸಿ, ಕಾಲಮಿತಿಯೊಳಗೆ ಇತ್ಯರ್ಥಪಡಿಸಬೇಕು ಎಂದ ಸಚಿವರು, ಮಹಾತ್ಮ ಗಾಂಧೀಜಿಯವರು ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ ಎಂದು ಕನಸು ಕಂಡಿದ್ದರು. ಹಾಗಾಗಿ ಗಾಂಧೀಜಿಯವರ ಆಶಯಕ್ಕನುಗುಣವಾಗಿ ಪ್ರತಿಯೊಬ್ಬ ಅಧಿಕಾರಿಯೂ ಕಾರ್ಯನಿರ್ವಹಿಸಬೇಕು ಎಂದರು.

ವ್ಯವಸ್ಥೆಯಲ್ಲಿ ಬದಲಾವಣೆ ತರಲು ನಮ್ಮ ಸರ್ಕಾರ ಈ ಪ್ರಜಾ ಸೇವೆ ಇಲಾಖೆ ಆರಂಭಿಸಿದೆ. ಇಲಾಖೆಯ ಆಶಯಗಳಿಗುನುಗುಣವಾಗಿ ದೇಶಕ್ಕೆ ಮಾದರಿಯಾಗುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದರು.

ಇಂದು ದೇವರ ಹಿಪ್ಪರಗಿಯಲ್ಲಿ 8.60 ಕೋಟಿ ರೂ. ವೆಚ್ಚದ ಎರಡು ಅಂತಸ್ತಿನ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂಬರುವ ದಿನಗಳಲ್ಲಿ ಈ ಕಟ್ಟಡ ಪ್ರಜೆಗಳ ಆಶೋತ್ತರಗಳಿಗೆ ಕಿವಿಯಾಗಲಿದೆ ಎಂದರು.

ಸಭೆಯಲ್ಲಿ ಪಟ್ಟಣ ಪಂಚಾಯತಿ ಅಧ್ಯಕ್ಷರಾದ ಜಯಶ್ರೀ ದೇವಣಗಾಂವ್, ಉಪಾಧ್ಯಕ್ಷರಾದ ರಮೇಶ ಮಸಬಿನಾಳ, ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷರಾದ ಸಾಹೇಬಗೌಡ ಬಿರಾದಾರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಲಕ್ಷ್ಮಣ ನಿಂಬರಗಿ, ತಹಶೀಲ್ದಾರ ನಿಂಗಪ್ಪ ಬಿರಾದಾರ ಸೇರಿದಂತೆ ಜಿಲ್ಲಾ ಹಾಗೂ ದೇವರ ಹಿಪ್ಪರಗಿ ತಾಲೂಕಾ ಅಧಿಕಾರಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.





"ತಂತ್ರಾಂಶದಲ್ಲಿ ಸಾರ್ವಜನಿಕರ ದೂರು ನಮೂದು ಮಾಡಿ ಪ್ರತ್ಯೇಕ ಐಡಿ ನೀಡಲಾಗುವುದು. ಬಳಿಕ ಇಲಾಖಾವಾರು ವರ್ಗೀಕರಿಸಿ ಒಟಿಪಿ ಮೂಲಕ ದೂರುದಾರರ ದೂರು ಪರಿಶೀಲಿಸಲು ಅವಕಾಶವಿದೆ. ಗ್ರಾಮ ಇನ್ ಮೂಲಕ ಸಮಸ್ಯೆಗಳನ್ನು ಐಡಿ ಟ್ರ್ಯಾಕಿಂಗ್ ಮಾಡಬಹುದಾಗಿದೆ."

■ ಡಾ. ಆನಂದ ಕೆ.
ಜಿಲ್ಲಾಧಿಕಾರಿ, ವಿಜಯಪುರ

### ಸಾರ್ವಜನಿಕರ ಅಹವಾಲು ಆಲಿಸಿದ ಸಚಿವರು

ಸಾರ್ವಜನಿಕರ ಸಮಸ್ಯೆಗಳನ್ನು ಖುದ್ದು ಆಲಿಸಿದ ಸಚಿವರಾದ ಎಂ.ಬಿ. ಪಾಟೀಲ ಅವರು, ಕೆಲ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು, ಇನ್ನು ಕೆಲ ಸಮಸ್ಯೆಗಳನ್ನು ತಕ್ಷಣ ಇತ್ಯರ್ಥಪಡಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.



### ಬೃಹತ್ ಕೈಗಾರಿಕೆ ಸ್ಥಾಪಿಸಲು ಸಚಿವರಿಗೆ ಮನವಿ ಮಾಡಿದ ಶಾಸಕ ಮನಗೂಳಿ

ಸಿಂದಗಿ ಶಾಸಕರಾದ ಅಶೋಕ ಮನಗೂಳಿ ಮಾತನಾಡಿ, ಪ್ರಜಾಸೇವಾ ಆಂದೋಲನದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಕಾರ್ಯ ನಡೆಯುತ್ತಿದೆ. ಕುಡಿಯುವ ನೀರು, ನೀರಾವರಿ, ವಿದ್ಯುತ್, ನಿವೇಶನ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸಾರ್ವಜನಿಕರು ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದರು.

ನೀರಾವರಿ ಯೋಜನೆಗಳ ವೇಗವರ್ಧನೆಗೆ ಆದ್ಯತೆ ನೀಡಲಾಗಿದೆ. ಸಿಂದಗಿ ನಗರದ 82 ಫಲಾನುಭವಿಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ 60 ಫಲಾನುಭವಿಗಳಿಗೆ ಉಚಿತ ನಿವೇಶನ ಹಂಚಿಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮನೆ ನಿರ್ಮಾಣಕ್ಕೂ ಕ್ರಮ ಕೈಗೊಳ್ಳಲಾಗುವುದು

ಎಂದು ಹೇಳಿದರು.

ಸಿಂದಗಿ ನಗರದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ರಿಂಗ್ ರಸ್ತೆ ನಿರ್ಮಾಣದ ಅಗತ್ಯವಿದ್ದು, ಇದಕ್ಕೆ ಅಗತ್ಯ ಅನುದಾನ ಒದಗಿಸುವಂತೆ ಸಚಿವರಿಗೆ ಮನವಿ ಮಾಡಲಾಗಿದೆ. ಅಲ್ಲದೆ, ತಾಲೂಕಿನಲ್ಲಿ ಲಭ್ಯವಿರುವ 275 ಎಕರೆ ಜಮೀನಿನಲ್ಲಿ ಬೃಹತ್ ಕೈಗಾರಿಕೆ ಸ್ಥಾಪಿಸುವ ಮೂಲಕ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸಚಿವರ ಗಮನಕ್ಕೆ ತರಲಾಗಿದೆ ಎಂದರು.

### ಸಿಂದಗಿಯಲ್ಲಿ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ
## ಪ್ರಜಾಸೇವೆ ಇಲಾಖೆಯಿಂದ ಮನೆಬಾಗಿಲಿಗೆ ಆಡಳಿತ



ವಿಜಯಪುರ: ಸಾರ್ವಜನಿಕರ ದೂರು ಹಾಗೂ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಆಯಾ ಇಲಾಖೆಗಳ ಹಂತದಲ್ಲಿಯೇ ತ್ವರಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ಪ್ರಜಾಸೇವೆ ಆಂದೋಲನಾ ಕಾರ್ಯಕ್ರಮ ಜಾರಿಗೆ ತರಲಾಗಿದೆ. ಜನರ ಸಮಸ್ಯೆಗಳಿಗೆ ಮನೆಬಾಗಿಲಲ್ಲೇ ಪರಿಹಾರ ಒದಗಿಸುವುದು ಸರ್ಕಾರದ ಪ್ರಮುಖ ಆಶಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹೇಳಿದರು.

ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ ಎಂಬ ಘೋಷ ವಾಕ್ಯದಡಿ ಸಿಂದಗಿ ಪಟ್ಟಣದ ಮಾಂಗಲ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಸಿಂದಗಿ ತಾಲೂಕಾ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಾರ್ವಜನಿಕರು ಸಲ್ಲಿಸುವ ಅರ್ಜಿಗಳ ಪ್ರಗತಿಯನ್ನು ಪರಿಶೀಲಿಸಲು ಹಾಗೂ ಅವುಗಳ ವಿಲೇವಾರಿಯ ಬಗ್ಗೆ ಮಾಹಿತಿ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿದೆ. ಭೂಸ್ವಾಧೀನ, ಹಣಕಾಸು ಹಾಗೂ ಭೂಪರಿಹಾರಕ್ಕೆ ಸಂಬಂಧಿಸಿದ ಸಂಕೀರ್ಣ ಸಮಸ್ಯೆಗಳನ್ನು ಸರ್ಕಾರದ ಹಂತಕ್ಕೆ ಕಳುಹಿಸಿ ಸೂಕ್ತವಾಗಿ ಇತ್ಯರ್ಥಪಡಿಸಲಾಗುವುದು ಎಂದರು.

ಸ್ಥಳೀಯವಾಗಿ ಕೈಗಾರಿಕೆಗಳ ಸ್ಥಾಪನೆಗೆ ಶಾಸಕ ಮನಗೂಳಿ ಸಲ್ಲಿಸಿದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಈ ಭಾಗದ ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.



"ಪಿಂಚಣಿ, ವೃದ್ಧಾಪ್ಯ ವೇತನ, ನೀರಾವರಿ ಹಾಗೂ ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕವಾಗಿ ಶ್ರಮಿಸಬೇಕು."

■ ರಾಜುಗೌಡ ಪಾಟೀಲ
ದೇವರಹಿಪ್ಪರಗಿ ಶಾಸಕರು

### ಸಿಂದಗಿಯಲ್ಲಿ ಒಟ್ಟು 77 ಅರ್ಜಿಗಳ ಸ್ವೀಕಾರ

ಸಿಂದಗಿಯಲ್ಲಿ ನಡೆದ ಪ್ರಜಾಸೇವಾ ಆಂದೋಲನದಲ್ಲಿ ವಿವಿಧ ಇಲಾಖೆಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಒಟ್ಟು 77 ಅರ್ಜಿಗಳನ್ನು ಸ್ವೀಕರಿಸಲಾಯಿತು. ಕಂದಾಯ ಇಲಾಖೆಗೆ 23, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ 19, ಗ್ರಾಮೀಣ ಅಭಿವೃದ್ಧಿ ಇಲಾಖೆಗೆ 12, ತಾಲೂಕು ಪಂಚಾಯಿತಿಗೆ 5, ನಗರಸಭೆ/ಪೌರಾಡಳಿತ ನಿರ್ದೇಶನಾಲಯಕ್ಕೆ 5, ಕೃಷಿ, ಶಿಕ್ಷಣ ಹಾಗೂ ಭೂಮಾಪನ ಇಲಾಖೆಗೆ ತಲಾ 3, ಸಾರಿಗೆ ಹಾಗೂ ಲೋಕೋಪಯೋಗಿ ಇಲಾಖೆಗೆ ತಲಾ 2 ಅರ್ಜಿಗಳು ಸಲ್ಲಿಕೆಯಾಗಿವೆ.

# ಗಣಪ ಹೋದ ಜೋಕುಮಾರ ಬಂದ!

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ರಾಮ್ ಎಮ್ ಇಟ್ಟಿ

ಬಾಗಲಕೋಟೆ (ಜಮಖಂಡಿ): ಗಣೇಶ ಚತುರ್ಥಿಯ ಸಂಭ್ರಮಕ್ಕೆ ಭಕ್ತಿಯಿಂದ ವಿದಾಯ ಹೇಳುತ್ತಿದ್ದಂತೆ ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಮತ್ತೊಂದು ಅಪರೂಪದ ಜನಪದ ಪರಂಪರೆ ಜೀವ ಪಡೆದುಕೊಂಡಿದೆ. "ಗಣಪ ಹೋದ ಜೋಕುಮಾರ ಬಂದ" ಎಂಬ ಮಾತಿನೊಂದಿಗೆ ಹಳ್ಳಿಗಳ ಬೀದಿಬೀದಿಗಳಲ್ಲಿ ಜೋಕುಮಾರಸ್ವಾಮಿಯ ಆಚರಣೆ ಆರಂಭವಾಗಿದ್ದು, ಮಣ್ಣಿನ ಮೂರ್ತಿಯೊಂದಿಗೆ ಮನೆಮನೆಗೆ ತೆರಳುವ ಮಹಿಳೆಯರ ತಂಡಗಳು ಜನಪದ ಹಾಡುಗಳ ಮೂಲಕ ಮಳೆಬೆಳೆ ಸಮೃದ್ಧಿಗಾಗಿ ಪ್ರಾರ್ಥಿಸುತ್ತಿವೆ.

ಬೇವಿನ ಸೊಪ್ಪಿನಿಂದ ಅಲಂಕರಿಸಿದ ಬುಟ್ಟಿಯಲ್ಲಿ ಜೋಕುಮಾರಸ್ವಾಮಿಯ ಮಣ್ಣಿನ ಮೂರ್ತಿಯನ್ನು ಹೊತ್ತುಕೊಂಡು ಮಹಿಳೆಯರು ಮನೆ ಮನೆಗೆ ತೆರಳುವುದು ಈ ಆಚರಣೆಯ ಪ್ರಮುಖ ವಿಶೇಷ. ಜೋಕುಮಾರನನ್ನು ಮನೆಗೆ ಬರಮಾಡಿಕೊಂಡು ಪೂಜಿಸುವ ಕುಟುಂಬಗಳು ಧಾನ್ಯ, ದಕ್ಷಿಣೆ ಹಾಗೂ ತಮ್ಮ ಸಾಮರ್ಥ್ಯಕ್ಕೆ ತಕ್ಕ ಕಾಣಿಕೆ ನೀಡುವುದು ವಾಡಿಕೆ. ಹೀಗೆ ಒಂದು ಮನೆಯಿಂದ ಮತ್ತೊಂದು ಮನೆಗೆ ಸಾಗುವ ಜೋಕುಮಾರನೊಂದಿಗೆ ಗ್ರಾಮದ ಒಗ್ಗಟ್ಟು, ನಂಬಿಕೆ ಮತ್ತು ಜನಪದ ಸಂಸ್ಕೃತಿಯೂ ಸಾಗುತ್ತಿದೆ.

### ಮಹಿಳೆಯರ ಹೆಜ್ಜೆಯಲ್ಲಿ ಜೀವಂತವಾಗಿರುವ ಪರಂಪರೆ

ಈ ಜನಪದ ಆಚರಣೆಯನ್ನು ಜೀವಂತವಾಗಿರಿಸುವಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಗಮನಾರ್ಹ. ತಲೆಮಾರುಗಳಿಂದ ಹಿರಿಯರಿಂದ ಕಿರಿಯರಿಗೆ ಬಂದಿರುವ ಹಾಡುಗಳು, ಆಚರಣೆಯ ಕ್ರಮಗಳು ಮತ್ತು ನಂಬಿಕೆಗಳನ್ನು ಮಹಿಳೆಯರೇ ಮುಂದಿನ ಪೀಳಿಗೆಗೆ ಕೊಂಡೊಯ್ಯುತ್ತಿದ್ದಾರೆ.

### ಒಂದು ಹಬ್ಬ ಮುಗಿದರೆ ಮತ್ತೊಂದು ನೆನಪು

ಗಣೇಶನ ವಿಸರ್ಜನೆಯೊಂದಿಗೆ ಹಬ್ಬದ ಸಂಭ್ರಮ ಮುಗಿಯುವುದಿಲ್ಲ. ಉತ್ತರ ಕರ್ನಾಟಕದ ಮಣ್ಣಿನಲ್ಲಿ ಅದು ಮತ್ತೊಂದು ಜನಪದ ಆಚರಣೆಗೆ ದಾರಿ ಮಾಡಿಕೊಡುತ್ತದೆ. ಗಣಪನಿಗೆ ಭಕ್ತಿಯಿಂದ ಬೀಳ್ಕೊಟ್ಟು, ಜೋಕುಮಾರನನ್ನು ಆತ್ಮೀಯವಾಗಿ ಬರಮಾಡಿಕೊಳ್ಳುವ ಈ ಪರಂಪರೆ "ಹಬ್ಬಗಳು ಬದಲಾಗಬಹುದು, ಆದರೆ ಮಣ್ಣಿನೊಂದಿಗೆ ಬೆಸೆದ ಜನರ ಭಾವನೆಗಳು ಬದಲಾಗುವುದಿಲ್ಲ" ಎಂಬುದನ್ನು ಸಾರುತ್ತದೆ.



ಮಳೆಗಾಗಿ ಮೊರೆಯಿಡುವ ಜನಪದ ಧ್ವನಿ: ಕೃಷಿಯನ್ನೇ ಜೀವನದ ಆಧಾರವಾಗಿಸಿಕೊಂಡಿರುವ ಉತ್ತರ ಕರ್ನಾಟಕದ ಜನರ ಪಾಲಿಗೆ ಜೋಕುಮಾರನ ಆಗಮನ ಕೇವಲ ಆಚರಣೆಯಲ್ಲ; ಅದು ಮಳೆಗಾಗಿ ಸಲ್ಲಿಸುವ ಜನಪದ ಪ್ರಾರ್ಥನೆ. ಮಳೆ ಬಂದು ಕೆರೆ ಕಟ್ಟೆಗಳು ತುಂಬಲಿ, ಹೊಲಗಳಲ್ಲಿ ಹಸಿರು ಹರಡಲಿ, ರೈತನ ಮನೆಮನದಲ್ಲಿ ಸಮೃದ್ಧಿ ನೆಲೆಸಲಿ ಎಂಬ ಆಶಯ ಜೋಕುಮಾರನ ಹಾಡುಗಳಲ್ಲಿ ಅಡಕವಾಗಿದೆ.

"ಅಡ್ಡಡ್ಡ ಮಳೆ ಬಂದು, ದೊಡ್ಡ ದೊಡ್ಡ ಕೆರೆಗಳೆಲ್ಲ ತುಂಬಿ, ಒಡ್ಡುಗಳೆಲ್ಲ ಒಡೆದಾವು.." ಎಂಬಂತಹ ಜನಪದ ಸಾಲುಗಳು ಮಳೆಗಾಗಿ ಹಂಬಲಿಸುವ ಕೃಷಿ ಸಂಸ್ಕೃತಿಯ ಮನಸ್ಸನ್ನು ಪ್ರತಿಬಿಂಬಿಸುತ್ತವೆ.

ಜನನಂಬಿಕೆಯ ಪ್ರಕಾರ ಜೋಕುಮಾರಸ್ವಾಮಿ ಮನೆಮನೆಗೆ ತೆರಳಿ ಜನರ ಸಂಕಷ್ಟಗಳನ್ನು ಕಂಡು, ಮಳೆಬೆಳೆ ಸಮೃದ್ಧಿಗಾಗಿ ದೇವರಲ್ಲಿ ಮೊರೆಯಿಡುವ 'ಮಳೆಯ ದೂತ' ಎಂಬ ಭಾವನೆ ಇದೆ. ಹೀಗಾಗಿ ಜೋಕುಮಾರನ ಆಗಮನಕ್ಕೆ ಗ್ರಾಮೀಣ ಜನರಲ್ಲಿ ವಿಶೇಷ ಭಕ್ತಿ ಮತ್ತು ನಿರೀಕ್ಷೆ ಮೂಡುತ್ತದೆ.

ಜೋಕುಮಾರನ ಹಾಡುಗಳಲ್ಲಿ ಕೇವಲ ಭಕ್ತಿ ಮಾತ್ರವಲ್ಲ; ಗ್ರಾಮೀಣ ಬದುಕಿನ ನೋವುನಲಿವು, ಮಳೆಯ ನಿರೀಕ್ಷೆ, ಕೃಷಿಯ ಸಂಕಷ್ಟ, ಕುಟುಂಬದ ನೆಮ್ಮದಿ ಮತ್ತು ಸಮೃದ್ಧ ಬದುಕಿನ ಕನಸುಗಳೂ ವ್ಯಕ್ತವಾಗುತ್ತವೆ.

ಆಧುನಿಕ ಜೀವನಶೈಲಿ, ತಂತ್ರಜ್ಞಾನ ಮತ್ತು ಬದಲಾಗುತ್ತಿರುವ ಗ್ರಾಮೀಣ ಪರಿಸರದ ನಡುವೆಯೂ ಜೋಕುಮಾರನ ಆಚರಣೆ ಮುಂದುವರಿದಿರುವುದು ಜನಪದ ಸಂಸ್ಕೃತಿಯ ಬೇರುಗಳು ಇನ್ನೂ ಗಟ್ಟಿಯಾಗಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.



"ಜೋಕುಮಾರನ ಆಚರಣೆ ಕೇವಲ ಧಾರ್ಮಿಕ ನಂಬಿಕೆಯಲ್ಲ; ಅದು ಉತ್ತರ ಕರ್ನಾಟಕದ ಕೃಷಿ ಸಂಸ್ಕೃತಿ, ಜನಪದ ಸಾಹಿತ್ಯ ಮತ್ತು ಗ್ರಾಮೀಣ ಬದುಕಿನ ಜೀವಂತ ದಾಖಲೆ. ಮಳೆಗಾಗಿ ರೈತನ ಹಂಬಲ, ಸಮೃದ್ಧಿಗಾಗಿ ಕುಟುಂಬದ ಪ್ರಾರ್ಥನೆ ಹಾಗೂ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಮಹಿಳೆಯರ ಪಾತ್ರಇವೆಲ್ಲವೂ ಜೋಕುಮಾರನ ಆಚರಣೆಯಲ್ಲಿ ಒಟ್ಟಾಗಿ ಕಾಣುತ್ತವೆ."

■ ಜನಪದ ಸಂಸ್ಕೃತಿ ಅಧ್ಯಯನಕಾರರ ಅಭಿಪ್ರಾಯ

### ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಮೊಳಗಿದ ಜೋಕುಮಾರನ ಹಾಡು | ಮಳೆಬೆಳೆ ಸಮೃದ್ಧಿಗಾಗಿ ಮನೆಮನೆಗೆ ಬಂದ ಜನಪದ ಧೂತ

### ಮಣ್ಣಿನ ಮೂರ್ತಿಯಲ್ಲಿ ಮಣ್ಣಿನ ಬದುಕಿನ ಕಥೆ

ಜೋಕುಮಾರನ ಮೂರ್ತಿ ಮಣ್ಣಿನಿಂದಲೇ ರೂಪುಗೊಳ್ಳುವುದು ಈ ಆಚರಣೆಯ ಮತ್ತೊಂದು ಅರ್ಥಪೂರ್ಣ ಅಂಶ. ಮಣ್ಣಿನಲ್ಲಿ ಬದುಕು ಕಟ್ಟಿಕೊಂಡ ರೈತ ಸಮುದಾಯಕ್ಕೆ ಮಣ್ಣೇ ದೇವರು, ಮಳೆಯೇ ಜೀವ, ಬೆಳೆಯೇ ಭರವಸೆ. ಹೀಗಾಗಿ ಮಣ್ಣಿನ ಜೋಕುಮಾರನನ್ನು ಮನೆಗೆ ಬರಮಾಡಿಕೊಳ್ಳುವ ಆಚರಣೆಯ ಹಿಂದೆ ರೈತ ಬದುಕಿನ ಆಳವಾದ ಭಾವನೆ ಅಡಗಿದೆ.

# ವಿಶ್ವ ಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯದ ಕೊಡುಗೆ

■ ಉದಯರಶ್ಮಿ ದಿನಪತ್ರಿಕೆ

ವಚನ ಚಳುವಳಿಯ ಕಾಲ 12 ನೆಯ ಶತಮಾನ. ಬಸವಣ್ಣನವರ ನಾಯಕತ್ವದಲ್ಲಿ ಎಲ್ಲಾ ಮೇಲು ಮತ್ತು ತಳ ಸಮುದಾಯದವ–ರಿಂದ ನಡೆದ ಅಪರೂಪದ ಪ್ರಬುದ್ಧ ಕ್ರಾಂತಿಕಾರಕ ಸಾಹಿತ್ಯವಾಗಿದೆ. ಶತಶತಮಾನಗಳಿಂದ ಎಲ್ಲಾ ರಂಗದಲ್ಲೂ ತುಳಿತಕ್ಕೆ ಒಳಗಾದ ದಮನಿತರ ಶೋಷಿತರ ಕಾರ್ಮಿಕರ ಅಸ್ಪೃಶ್ಯರ ಮಹಿಳೆಯರ ಬಡವರ ಬಂಡಾಯದ ಪ್ರತಿಭಟನೆಯ ಧ್ವನಿ ಎನಿಸಿದ ವಚನ ಸಾಹಿತ್ಯ ಜಗತ್ತಿನಲ್ಲಿಯೇ ಮೊಟ್ಟ ಮೊದಲ ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತೀಕ.

ವಿಶ್ವ ಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯದ ಕೊಡುಗೆ ಅತ್ಯಮೂಲ್ಯ ಹಾಗೂ ಅನನ್ಯವಾದುದಾಗಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಸೇರಿದಂತೆ ಹಲವು ಶಿವಶರಣರು ಸೃಷ್ಟಿಸಿದ ಸಾಗರ ಆಳದ ಆಕಾಶದೆತ್ತರದ ಈ ವಚನ ಸಾಹಿತ್ಯ ಪ್ರಕಾರವು ಕೇವಲ ಒಂದು ಧರ್ಮ ಅಥವಾ ಪ್ರದೇಶಕ್ಕೆ ಸೀಮಿತವಾಗದೆ, ಇಡೀ ಮಾನವಕುಲಕ್ಕೆ ಅನ್ವಯಿಸುವ ಸಾರ್ವತ್ರಿಕ ಮೌಲ್ಯಗಳನ್ನು ಒಳಗೊಂಡಿದೆ.

ವಿಶ್ವ ಸಾಹಿತ್ಯ ಮತ್ತು ಚಿಂತನಾ ಕ್ರಮಕ್ಕೆ ವಚನ ಸಾಹಿತ್ಯ ನೀಡಿರುವ ಪ್ರಮುಖ ಕೊಡುಗೆಗಳು

1. ಸಾಹಿತ್ಯದ ಪ್ರಜಾಪ್ರಭುತ್ವೀಕರಣ ಮತ್ತು ಸರಳತೆ


ಅಂದಿನ ಕಾಲದಲ್ಲಿ ಜ್ಞಾನ ಮತ್ತು ಸಾಹಿತ್ಯ ಕೇವಲ ಸಂಸ್ಕೃತದಂತಹ ಉನ್ನತ ಭಾಷೆಗಳಿಗೆ ಹಾಗೂ ಕೆಲವು ವರ್ಗದ ಜನರಿಗೆ ಮಾತ್ರ ಸೀಮಿತವಾಗಿತ್ತು. ವಚನಕಾರರು ಜಗತ್ತಿನಲ್ಲಿಯೇ ಮೊದಲ ಬಾರಿಗೆ ಸಾಹಿತ್ಯವನ್ನು ಜನಸಾಮಾನ್ಯರ ಆಡುಭಾಷೆಗೆ ತಂದರು. "ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ" ವಿಶಿಷ್ಟ ಶೈಲಿಯ ಮೂಲಕ ಸಂಕೀರ್ಣ ತತ್ವಶಾಸ್ತ್ರವನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಮಾಡಿದ್ದು ವಿಶ್ವ ಸಾಹಿತ್ಯ ಚರಿತ್ರೆಯಲ್ಲೇ ಒಂದು ಅಪರೂಪದ ಕ್ರಾಂತಿ.

2 ಜಗತ್ತಿನ ಮೊದಲ ಸಂಸತ್ತು: 'ಅನುಭವ ಮಂಟಪ

'ಬಸವಣ್ಣನವರು ಸ್ಥಾಪಿಸಿದ 'ಅನುಭವ ಮಂಟಪ'ವು ಜಗತ್ತಿನ ಅತ್ಯಂತ ಹಳೆಯ ಮತ್ತು ಮೊದಲ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಸಂಸತ್ತು ಎನ್ನಬಹುದು. ಇಲ್ಲಿ ರಾಜನಿಂದ ಹಿಡಿದು ಸಾಮಾನ್ಯ ಕಾಯಕ ಜೀವಿಯವರೆಗೆ ಎಲ್ಲರಿಗೂ ಮುಕ್ತವಾಗಿ ತಮ್ಮ ಆಲೋಚನೆಗಳನ್ನು ವಚನಗಳ ಮೂಲಕ ಹಂಚಿಕೊಳ್ಳುವ ಸ್ವಾತಂತ್ರ್ಯವಿತ್ತು.

ಈಅಭಿವ್ಯಕ್ತಿಸ್ವಾತಂತ್ರ್ಯಮತ್ತುಸಮಾನತೆಯಪರಿಕಲ್ಪನೆಯನ್ನುವಚನ ಸಾಹಿತ್ಯವು ಜಾಗತಿಕ ಸಾಹಿತ್ಯ ಲೋಕಕ್ಕೆ ಬಹುಬೇಗನೆ ಪರಿಚಯಿಸಿತು.


3. ಲಿಂಗ ಸಮಾನತೆ ಮತ್ತು ಮಹಿಳಾ ಸಾಹಿತ್ಯಕ್ಕೆ ಮುನ್ನುಡಿ



ವಿಶ್ವದ ಇತರೆಡೆ ಮಹಿಳಾ ಹಕ್ಕುಗಳ ಬಗ್ಗೆ ಕಲ್ಪನೆಯೂ ಇಲ್ಲದ 12ನೇ ಶತಮಾನದಲ್ಲೇ ವಚನ ಚಳವಳಿಯು ಲಿಂಗ ಸಮಾನತೆಗೆ ಭದ್ರ ಬುನಾದಿ ಹಾಕಿತು. ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ ಸೇರಿದಂತೆ 35 ಕ್ಕೂ ಹೆಚ್ಚು ಶರಣೆಯರು ತಮ್ಮ ಸ್ವತಂತ್ರ ವಿಚಾರ ಹಾಗೂ ಅನುಭವಗಳನ್ನು ವಚನಗಳ ಮೂಲಕ ದಾಖಲಿಸಿದರು. ಇದು ಜಾಗತಿಕ ಮಟ್ಟದ ಮೊದಲ ಮಹಿಳಾ ಸಾಹಿತ್ಯದ ಪ್ರಮುಖ ಕ್ರಾಂತಿಗಳಲ್ಲೊಂದಾಗಿದೆ.

4.ಕಾಯಕಮತ್ತುದಾಸೋಹತತ್ವ(ಆರ್ಥಿಕ–ಸಾಮಾಜಿಕಚಿಂತನೆ)

ಕಾಯಕವೇ ಕೈಲಾಸ" (ಕೆಲಸವೇ ದೇವಲೋಕ) ಮತ್ತು "ದಾಸೋಹ" (ಸಮಾಜಕ್ಕೆ ಮರಳಿ ನೀಡುವುದು) ಎಂಬ ಎರಡು ಅದ್ಭುತ ಪರಿಕಲ್ಪನೆಗಳನ್ನು ವಚನಕಾರರು ಜಗತ್ತಿಗೆ ನೀಡಿದರು. ಯಾವುದೇ ಕೆಲಸ ಕೀಳಲ್ಲ ಎಂಬ ಶ್ರಮದ ಗೌರವವನ್ನು ಎತ್ತಿಹಿಡಿಯುವ ಮೂಲಕ, ಸಮಗ್ರ ಅರ್ಥವ್ಯವಸ್ಥೆ ಮತ್ತು ಸಮಾಜದ ಕಲ್ಯಾಣಕ್ಕೆ ವಚನ ಸಾಹಿತ್ಯವು ಹೊಸ ದಾರಿಯನ್ನು ತೋರಿಸಿಕೊಟ್ಟಿತು.



5. ಸಾರ್ವತ್ರಿಕ ಮಾನವೀಯ ಮೌಲ್ಯಗಳು


ವಚನಗಳು ಜಾತಿ, ವರ್ಗ ಮತ್ತು ಧರ್ಮದ ಗಡಿಗಳನ್ನು ಮೀರಿ ನಿಲ್ಲುತ್ತವೆ. "ಇವನಾರವ ಇವನಾರವನೆನ್ನದೆ, ಇವ ನಮ್ಮವ ಇವ ನಮ್ಮವನೆನ್ನಿ" ಎಂಬ ಬಸವಣ್ಣನವರ ವಚನವು ಇಡೀ ಜಗತ್ತನ್ನು ಒಂದೇ ಕುಟುಂಬವಾಗಿ ಕಾಣುವ ವಿಶ್ವ ಪ್ರೇಮ ಮತ್ತು ವಿಶ್ವ ಶಾಂತಿಯ ಸಂದೇಶವನ್ನು ಸಾರುತ್ತದೆ. ದಯೆ, ಕರುಣೆ, ಸತ್ಯ ಮತ್ತು ಪ್ರಾಮಾಣಿಕತೆಯಂತಹ ಸಾರ್ವಕಾಲಿಕ ಮೌಲ್ಯಗಳನ್ನು ವಚನಗಳು ಬೋಧಿಸುತ್ತವೆ.

6 ವಚನಗಳ ಜಾಗತಿಕ ಮನ್ನಣೆ

ಲೇಖನ
– ಡಾ. ಶಶಿಕಾಂತ ಪಟ್ಟಣ
ರಾಮದುರ್ಗ – ಪುಣೆ



ಇತ್ತೀಚಿನ ದಶಕಗಳಲ್ಲಿ ಎ.ಕೆ. ರಾಮಾನುಜನ್ ಅವರಂತಹ ವಿದ್ವಾಂಸರು ವಚನಗಳನ್ನು ಇಂಗ್ಲಿಷ್ ಭಾಷೆಗೆ




ಅನುವಾದಿಸಿದ ನಂತರ (ಉದಾಹರಣೆಗೆ: Speaking of iva), ವಚನ ಸಾಹಿತ್ಯಕ್ಕೆ ವಿಶ್ವ ಮಾನ್ಯತೆ ದೊರಕಿದೆ.

ಜಗತ್ತಿನಾದ್ಯಂತ ಪ್ರಮುಖ ವಿಶ್ವವಿದ್ಯಾಲಯಗಳ ಸಾಹಿತ್ಯ ಮತ್ತು ತತ್ವಶಾಸ್ತ್ರದ ಪಠ್ಯಗಳಲ್ಲಿ ವಚನಗಳನ್ನು ಇಂದು ಅಧ್ಯಯನ ಮಾಡಲಾಗುತ್ತಿದೆ. ಅಮೇರಿಕಾ ಫ್ರಾನ್ಸ್ ಯುರೋಪ್ ಜರ್ಮನಿ ರಷ್ಯಾ ಮುಂತಾದಮುಂದುವರೆದರಾಷ್ಟ್ರಗಳಲ್ಲಿಬಸವಣ್ಣಮತ್ತುಶರಣರಸಮಗ್ರ ಕ್ರಾಂತಿ ಮತ್ತು ಸಾಮಾಜಿಕ ಧಾರ್ಮಿಕ ರಾಜಕೀಯ ಆಂದೋಲನಗಳ ಬಗ್ಗೆ ಗಂಭೀರ ಚರ್ಚೆ ಆಳವಾದ ಅಧ್ಯಯನಗಳನ್ನು ಎತ್ತಿ ಕೊಂಡಿದ್ದಾರೆ.

ವಚನ ಚಳುವಳಿಯಲ್ಲಿ ಕಂಡು ಬಂದ ಪ್ರಾಚೀನ ಗ್ರೀಕ್ ದೇಶದ ಅಕಾಡೆಮಿ ಮತ್ತು 13 ನೆಯ ಶತಮಾನದ ಯುನೈಟೆಡ್ ಕಿಂಗ್ಡಮ್ ಅವರು ಪ್ರತಿಪಾದಿಸಿದ ಮ್ಯಾಗ್ನ ಕಾರ್ಟ್ ಪ್ರಜಾಪ್ರಭುತ್ವಗಳ ಮೌಲ್ಯಗಳಿಗಿಂತ ಅತ್ಯಂತ ಅಪರೂಪದ ಪ್ರಬುದ್ಧ ಪ್ರಾಮಾಣಿಕ ವೈಚಾರಿಕ ನೆಲೆಯಲ್ಲಿ ರೂಪಗೊಂಡ ಸಿದ್ಧಾಂತಗಳ ಸಮನ್ವಯಕ ಶ್ರೇಷ್ಠ ದೇಸಿ ಅಭಿವ್ಯಕ್ತಿ ವಚನ ಸಾಹಿತ್ಯ.

ಒಂದು ಸಮಾರೋಪದಲ್ಲಿ ಹೇಳುವುದಾದರೆ, ವಚನ ಸಾಹಿತ್ಯವು ಕೇವಲ ಕಾವ್ಯವಲ್ಲ; ಅದು ಬದುಕುವ ಕಲೆಯನ್ನು ಕಲಿಸುವ, ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಜಾಗತಿ–ಕ ಮಟ್ಟದ ಶ್ರೇಷ್ಠ ಸಾಹಿತ್ಯವಾಗಿದೆ.ಸಕಲ ಜೀವಾತ್ಮರನ್ನು ಪ್ರೀತಿಸಿ ಸರ್ವರಿಗೂ ಸಮ ಬಾಳು ಸರ್ವರಿಗೂ ಸಮಪಾಲು ಎಂದು ಸಾರಿದ



ಜಗತ್ತಿನ ಸಮಾಜವಾದದ ಮೊದಲ ಸಿದ್ಧಾಂತ ವಚನ ಸಾಹಿತ್ಯ. ಶರಣರು ಇಂದು ಜಗತ್ತಿಗೆ ಕೊಟ್ಟ ಅಭೂತಪೂರ್ವ ವಚನಗಳು ಜಾಗತಿಕ ಮನುಕುಲಕೆ ಮಾನವೀಯ ಮೌಲ್ಯಗಳನ್ನು ಹೊಂದಿದ ಸಂವಿಧಾನ.

## ಕರಾಟೆ ಶಿಕ್ಷಕರ ಸಂಘದ ಪದಗ್ರಹಣ: ರಾಷ್ಟ್ರ ರಾಜ್ಯ ಮಟ್ಟದ ಸ್ಕೇಟಿಂಗ್ ಸಾಧಕರಿಗೆ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಸೆ.20 ರಂದು ಪಟ್ಟಣದ ವಿದ್ಯಾನಗರದಲ್ಲಿರುವ ಓಸ್ವಾಲ್ ಹಾಲ್‌ನಲ್ಲಿ ರಾಜ್ಯ ಕರಾಟೆ ಶಿಕ್ಷಕರ ಸಂಘದ ನೂತನ ಪದಾಧಿಕಾ–ರಿಗಳ ಪದಗ್ರಹಣ ಸಮಾರಂಭ ಹಾಗೂ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸ್ಕೇಟಿಂಗ್ ಪಂದ್ಯಾವಳಿಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಏಕಲವ್ಯ ರೋಲರ್ ಸ್ಕೇಟಿಂಗ್ ಅಕಾಡೆಮಿಯ ವಿದ್ಯಾರ್ಥಿಗಳ ಸನ್ಮಾನ ಸಮಾರಂಭವನ್ನು ಹಮ್ಮಿ ಕೊಳ್ಳಲಾಗಿದೆ ಎಂದು ಕರಾಟೆ ಶಿಕ್ಷಕರ ಸಂಘದ ವಕ್ತಾರ ಶಿವಕುಮಾರ ಶಾರದಳ್ಳಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ರಾಜ್ಯ ಕರಾಟೆ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮ ದಿವ್ಯ ಸಾನಿಧ್ಯವನ್ನು ಕುಂಟೋಜಿ ಸಂಸ್ಥಾನ ಭಾವೈಕ್ಯತಾ ಹಿರೇಮಠದ ಡಾ.ಚನ್ನವೀರ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಲಿದ್ದು, ಶಾಸಕ ಸಿ.ಎಸ್. ನಾಡಗೌಡ ಉದ್ಘಾಟಿಸಲಿದ್ದಾರೆ. ಸಿದ್ಧಸಿರಿ ಬ್ಯಾಂಕ್ ನ ರಾಜ್ಯ ಉಪಾಧ್ಯಕ್ಷರೂ ಆದ ಜಿಲ್ಲಾ ಪಂಚಾತಯ್ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಿ.ಎ.ಎಸ್.ಇಂಟರ್‌ನ್ಯಾಷನಲ್ ಸ್ಕೂಲ್ ಸಂಸ್ಥಾಪಕ ಶಿವನಗೌಡ ಬಿರಾದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಪಿಎಸ್‌ಐ ವಿಜಯಕುಮಾರ ತಳವಾರ, ಕರ್ನಾಟಕ ಬ್ಯಾಂಕ್ ಮಾಜಿ ಅಧ್ಯಕ್ಷ ಸತೀಶ ಓಸ್ವಾಲ್, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಸೇರಿದಂತೆ ವಿಶೇಶ ಅತಿಥಿಗಳಾಗಿ ಆಗಮಿಸಲಿರುವದಾಗಿ ಅವರು ತಿಳಿಸಿದ್ದಾರೆ.

ಕ್ರೀಡಾಭಿಮಾನಿಗಳು, ಮುಖಂಡರು ಆಗಮಿಸಿ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸುವಂತೆ ಶಾರದಳ್ಳಿ ಕೋರಿದ್ದಾರೆ.

## ಸೆ.22 ರಂದು ಆರೋಗ್ಯ ಉಚಿತ ತಪಾಸಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 11ನೇ ರಾಷ್ಟ್ರೀಯ ಆಯುರ್ವೇದ ದಿನದ ಅಂಗವಾಗಿ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ ಜಿಲ್ಲಾ ಆಯುಷ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್ 22 ರಂದು ಮಂಗಳವಾರ ಉಚಿತ ಆರೋಗ್ಯ, ರಕ್ತ ತಪಾಸಣೆ(ಊಥ ಮತ್ತು ಖಃಖ) ಹಾಗೂ ಔಷಧ ವಿತರಣೆ ಕಾರ್ಯಕ್ರಮ ನಡೆಯಲಿದೆ.

ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಹೈಟೆಕ್ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂ–ಜಯ ಕಡ್ಲಿಮಟ್ಟಿ ಮತ್ತು ಜಿಲ್ಲಾ ಆಯುಷ್ ಅಧಿಕಾರಿ ಡಾ. ವಿದ್ಯಾವತಿ ಅಥಣಿ ಅವರು ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಆಸ್ಪತ್ರೆಯ ಮೊ. ನಂ. 9513397413 ಸಂಪರ್ಕಿಸಬಹುದಾಗಿದೆ.

## ವಿಜಯಪುರ ಎಸಿ ಗುರುನಾಥ ದಡ್ಡೆ ಅವರಿಗೆ ಬೀಳ್ಕೊಡುಗೆ, ನೂತನ ಎಸಿ ಜುಫಿಶಾನ್ ಹಕ್ ರಿಗೆ ಸ್ವಾಗತ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅಭಿಮತ

# ಸಾರ್ವಜನಿಕ ಸೇವೆಯಲ್ಲಿ ಕಂದಾಯ ಇಲಾಖೆ ಮುಂಚೂಣಿ ಪಾತ್ರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರ್ ಅವರು ಒಂದು ತಂಡವಾಗಿ ಕಾರ್ಯ ನಿರ್ವಹಿಸಿದ್ದಾರೆ. ದೂರದೃಷ್ಟಿ ಹಾಗೂ ಆಸಕ್ತಿಯಿಂದ ಕಾರ್ಯ ನಿರ್ವಹಿಸುವ ಮೂಲಕ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾಧಿಕಾ–ರಿಗಳಾದ ಡಾ. ಆನಂದ ಕೆ. ಅವರು ಹೇಳಿದರು.

ನಗರದ ಗಾಂಧಿ ಭವನದಲ್ಲಿ ವಿಜಯಪುರ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ ಹಾಗೂ ಹೊಸ ಉಪವಿಭಾಗಾಧಿಕಾರಿ ಜುಫಿಶಾನ್ ಹಕ್ ಅವರಿಗೆ ಗುರುವಾರ ರಾತ್ರಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಹಾಗೂ ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನೂತನ ಎಸಿ ಜುಫಿಶಾನ್ ಅವರು ಕಾರವಾರದಲ್ಲಿ ಪ್ರೊಬೇಷನರ್ ಅಧಿಕಾ–ರಿಯಾಗಿ ಉತ್ತಮ ಕಾರ್ಯನಿರ್ವಹಣೆ ಮಾಡಿದ್ದಾರೆ. ಕಂದಾಯ ಇಲಾಖೆ ಅಧಿಕಾ–ರಿಗಳು ಒಂದು ತಂಡ ಹಾಗೂ ಕುಟುಂಬವಾಗಿ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕ ಸೇವೆಯಲ್ಲಿ ಮುಂಚೂಣಿ ಇಲಾಖೆಯಾಗಿದ್ದು, ಜನರ ಒಳಿತಿಗಾಗಿ ಕಾರ್ಯ ನಿರ್ವಹಿಸೋಣ ಎಂದು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ವಿಜಯಪುರ ಉಪವಿಭಾಗದ ನೂತನ ಉಪವಿಭಾಗಾಧಿಕಾ–ರಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಜುಫಿಶಾನ್



ಹಕ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಇದೇ ವೇಳೆ ವರ್ಗಾವಣೆಗೊಂಡು ತೆರಳುತ್ತಿರುವ ನಿರ್ಗಮಿತ ಎಸಿ ಗುರುನಾಥ ದಡ್ಡೆ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಸನ್ಮಾನ ಸ್ವೀಕರಿಸಿ ಎಸಿ ಗುರುನಾಥ ದಡ್ಡೆ ಅವರು ಮಾತನಾಡಿ, ತಾವು ಈ ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ತಮ್ಮ ಕರ್ತವ್ಯದ ಅವಧಿಯಲ್ಲಿ ಬಹಳಷ್ಟು ಕಲಿಯಲು ಅವಕಾಶ ಸಿಕ್ಕಿದೆ. ತಮಗೆ ಎಲ್ಲರೂ ಸಹಕಾರ ನೀಡಿದ್ದಾರೆ. ಎಲ್ಲ ವಿಷಯವನ್ನು ಕಲಿಯುವ ಅವಕಾಶ ದೊರೆತಿ–ರುವುದು ಮರೆಯಲಾರದ ಸಂಗತಿ ಎನ್ನುವ ಮೂಲಕ ಜಿಲ್ಲೆಯಲ್ಲಿ ಕಾರ್ಯನಿರ್ವಹಣೆ ಕು–ರಿತು ಸವಿಸ್ತಾರವಾಗಿ ಹಂಚಿಕೊಂಡರು.

ನೂತನ ಉಪ ವಿಭಾಗಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ಜುಫಿಶಾನ್ ಹಕ್ ಅವರು ಮಾತನಾಡಿ, ಜಿಲ್ಲೆಯ ಒಳಿತಿಗಾಗಿ ಎಲ್ಲರೂ ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸೋಣ ಎಂದರು.

ಬಸವನ ಬಾಗೇವಾಡಿ ತಹಶೀಲ್ದಾರರಾದ ಸೋಮನಕಟ್ಟೆ, ತಹಶೀಲ್ದಾರ ಎ.ಡಿ. ಅಮರವಾಡಗಿ, ತಹಶೀಲ್ದಾರ್ ಸುರೇಶ ಚವಲಾರ ಮಾತನಾಡಿ, ಕಂದಾಯ ಇಲಾಖೆಯಲ್ಲಿ ತಮ್ಮ ಮೃದು ಸ್ವಭಾವ ಹಾಗೂ ಸೌಮ್ಯ ನಡೆಯಿಂದ ಪ್ರತಿಯೊಬ್ಬರ ಮನಗೆದ್ದಿದ್ದ ದಡ್ಡೆ ಅವರು, ಸಾರ್ವಜನಿಕರೊಂದಿಗೆ ಅತ್ಯುತ್ತಮ ಸಂವಹನ ಸಾಧಿಸಿ ಜನಾನುರಾಗಿ ಆಡಳಿತ ನೀಡಿದ್ದಾರೆ ಎಂದರು.

ಯುವ ಸಬಲೀಕರಣ ಸೇವೆ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ಧೈವಾಡಿ ಮಾತನಾಡಿ, ಎಸಿ ಗುರುನಾಥ ದಡ್ಡೆ ಅವರು, ಹೃದಯವಂತಿ–ಕೆಯ ಅಧಿಕಾರಿಯಾಗಿ ತಮ್ಮ ಜವಾಬ್ದಾರಿಯಿಂದ ಸೇವೆ ಸಲ್ಲಿಸಿದ್ದಾರೆ. ಎಲ್ಲರನ್ನೂ ವಿಶ್ವಾಸದಿಂದ ತೆಗೆದುಕೊಂಡು ಕಾರ್ಯನಿರ್ವಹಿಸುತ್ತಿದ್ದ ಜಿಲ್ಲೆಗೆ ಅವರು ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ತಹಶೀಲ್ದಾರ ಸಂತೋಷ ಮ್ಯಾಗೇರಿ ಹಾಗೂ ತಹಶೀಲ್ದಾರ ಪ್ರಶಾಂತ ಚನಗಿಂಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದು, ನೂತನ ಎಸಿ ಅವರನ್ನು ಗೌರವಿಸಿದರು. ನಿರ್ಗಮಿತ ಎಸಿ ಗುರುನಾಥ ದಡ್ಡೆ ಅವರನ್ನು ಈ ಸಂದರ್ಭದಲ್ಲಿ ಆತ್ಮೀಯವಾಗಿ ಸನ್ಮಾನಿಸಿ, ಬೀಳ್ಕೊಟ್ಟರು.

## ಆಟದ ಮೈದಾನ ಎಂಬ ಮಹತ್ವದ ಯೋಜನೆ ಜಾರಿಗೊಳಿಸಿ:ಸಿಎಂ ಅಬ್ದುಲ್ ಹಫೀಜ್ ಒತ್ತಾಯ

ಸೇಡಂ: ರಾಜ್ಯದ ಎಲ್ಲಾ ಗ್ರಾಮೀಣ ಭಾಗದಲ್ಲಿ ಅಡಗಿರುವ ಅದ್ಭುತ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಒಲಿಂಪಿಕ್ಸ್ ಮಟ್ಟಕ್ಕೆ

ಸಿದ್ಧಗೊಳಿಸಲು ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಸುಸಜ್ಜಿತ ಕ್ರೀಡಾಂಗಣಗಳನ್ನು ನಿರ್ಮಿಸುವಂತೆ ಆರ್.ಆರ್. ಫೌಂಡೇಶನ್ ಸಂಸ್ಥಾಪಕರು ಹಾಗೂ ಸೇಡಂನ ಯುವ ಕಾಂಗ್ರೆಸ್ ಮುಖಂಡರು ಕ್ರೀಡಾ ಪ್ರೇಮಿ ಅಬ್ದುಲ್ ಹಫೀಜ್ ಆರ್ ಆರ್ ಅವರು ರಾಜ್ಯದ ಮುಖ್ಯಮಂತ್ರಿಗಳಾದ ಡಿಕೆ ಶಿವಕುಮಾರ್ ಅವರಿಗೆ ಅಧಿಕೃತ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದ್ದರು.79ನೇ ಕಲ್ಯಾಣ ಕರ್ನಾಟಕ ಉತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಮನವಿ ಪತ್ರ ಸಲ್ಲಿಸಿದ ಅವರು ಗ್ರಾಮೀಣ ಭಾಗದ ಯುವಕರ ಸವಾಂಗೀಣ ಅಭಿವೃದ್ಧಿ ಹಾಗೂ ಕ್ರೀಡಾ ಪ್ರತಿಭೆಗಳ ಬೆಳವಣಿಗೆಯ ಜೊತೆಗೆ ಸಾಮಾಜಿಕ ಸೇವಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಯುವಕ ಸಂಘಗಳಿಗೆ 10 ಲಕ್ಷ ಅನುದಾನ ನೀಡಲು ಮುಂದಾಗಿರುವ ಕ್ರಮವನ್ನು ಆರ್.ಆರ್. ಫೌಂಡೇಶನ್ ವತಿಯಿಂದ ನಾನು ಅತ್ಯಂತ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಇದರೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾ ಮೂಲಸೌಕರ್ಯದ ಕೊರತೆಯಿಂದ ಅನೇಕ ಪ್ರತಿಭಾವಂತ ಯುವಕರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಸಾದ್ಯವಾಗುತ್ತಿಲ್ಲ. ಹೀಗಾಗಿ ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸುಸಜ್ಜಿತ ಕ್ರೀಡಾಂಗಣ (ಆಟದ ಮೈದಾನ) ನಿರ್ಮಾಸಲು ವಿಶೇಷ ಯೋಜನೆ ರೂಪಿಸಿ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ವಿನಮ್ರವಾಗಿ ಮನವಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಈ ಯೋಜನೆ ಜಾರಿಯಾದರೆ ಗ್ರಾಮೀಣ ಯುವಕರಲ್ಲಿ ಕ್ರೀಡಾಸಕ್ತಿ ಹೆಚ್ಚುವುದರ ಜೊತೆಗೆ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಅಲ್ಲದೆ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಕ್ರೀಡಾಪಟುಗಳನ್ನು ನಮ್ಮ ರಾಜ್ಯದಲ್ಲಿ ಬೆಳೆಸಲು ಇದು ಮಹತ್ವದ ಹೆಜ್ಜೆಯಾಗಲಿದೆ.ಅದ್ದರಿಂದ "ಗ್ರಾಪಂಗೊಂದು ಆಟದ ಮೈದಾನ ಎಂಬ ಮಹತ್ವದ ಯೋಜನೆಯನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸಿ" ರಾಜ್ಯದ ಗ್ರಾಮೀಣ ಯುವಕರ ಭವಿಷ್ಯಕ್ಕೆ ಬಲ ತುಂಬುವಂತೆ ತಮ್ಮಲ್ಲಿ ಸವಿನಯವಾಗಿ ಕೋರುತ್ತೇನೆ ಎಂದು ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

# ಇತಿಹಾಸ ಅರಿತವರಿಂದ ಭವಿಷ್ಯ ನಿರ್ಮಾಣ ಸಾಧ್ಯ

ಕಲಬುರಗಿ: ದೇಶ ಸ್ವಾತಂತ್ರ್ಯಗೊಂಡು ಒಂದು ವರ್ಷ, ಒಂದು ತಿಂಗಳು ಎರಡು ದಿಗಳ ಕಳೆದ ಬಳಿಕ ಹೈದರಾಬಾದ ಸಂಸ್ಥಾನದಿಂದ ವಿಮೋಚನೆಗೊಂಡ ಕಲ್ಯಾಣ ಕರ್ನಾಟಕ ಭಾಗದ ಸ್ವಾತಂತ್ರ್ಯ ಚಳವಳಿಗೆ ಅನೇಕರು ತ್ಯಾಗ, ಬಲಿದಾನ ಮಾಡಿದ್ದಾರೆ ಎಂದು ಕನ್ನಡ ನಾಡು ಲೇಖಕರು ಮತ್ತು ಓದುಗರ ಸಹಕಾರ ಸಂಘದ ಅಧ್ಯಕ್ಷ ಅಪ್ಪಾರಾವ ಅಕ್ಕೋಣಿ ತಿಳಿಸಿದರು.

ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಡಾ. ಸುಭಾಶ್ಚಂದ್ರ ದೊಡ್ಡಮನಿಯವರು ರಚಿಸಿದ ಆಪರೇಷನ್ ಪೊಲೊ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಹೈ.ಕ. ಇತಿಹಾಸ ಮತ್ತು ಹೋರಾಟ ಅತ್ಯಂತ ರೋಚಕವಾಗಿದೆ ಎಂದು ತಿಳಿಸಿದರು.

ಕಲಬುರಗಿಯ ಸರ್ದಾರ ಶರಣಗೌಡ, ಅಪ್ಪಾರಾವ ಪಾಟೀಲ, ಕೆ. ಚನ್ನಬಸಪ್ಪ, ಬೀದರ್ ನ ರಾಮಚಂದ್ರ ವೀರಪ್ಪ, ರಾಯಚೂರಿನ ಎಂ.ನಾಗಪ್ಪ, ಯಾದಗಿರಿಯ ಅಚ್ಚಪ್ಪಗೌಡ ಸುಬೇದಾರ, ಕೊಪ್ಪಳದ ಶಿವಮೂರ್ತಿ ಅಳವಂಡಿ ಮುಂತಾದವರಲ್ಲದೆ ಈ ಭಾಗದ ನೂರಾರು ಜನರು ತರಬೇತಿ, ಶಿಬಿರಗಳನ್ನು ನಡೆಸಿ ರಜಾಕಾರರ ವಿರುದ್ಧ ಸಮರ ಸಾರಿದರು. ಅಂದಿನ ಕೇಂದ್ರ ಗೃಹ ಸಚಿವರಾಗಿದ್ದ ವಲ್ಲಭಭಾಯಿ ಪಟೇಲರು

ಮಿಲ್ಟೀ ಕಾರ್ಯಾಚರಣೆ ನಡೆಸಿ ಹೈದ್ರಾಬಾದ ಸಂಸ್ಥಾನವನ್ನು ವಿಲೀನಗೊಳಿಸಿದರು ಎಂದು ಹೇಳಿದರು.

ಪುಸ್ತಕ ಕುರಿತು ಪತ್ರಕರ್ತ, ಲೇಖಕ ಡಾ. ಶಿವರಂಜನ ಸತ್ಯಂಪೇಟೆ ಮಾತನಾಡಿ, ವರ್ತಮಾನ ಅರಿಯಬೇಕಾದರೆ




ಭೂತಕಾಲ ಅರಿಯುವುದು ಅಗತ್ಯ. ಇತಿಹಾಸ ಅರಿತವ–ರಿಂದ ಮಾತ್ರ ಭವಿಷ್ಯ ನಿರ್ಮಾಣ ಎಂಬುದಕ್ಕೆ ಆಪರೇಷನ್ ಪೊಲೊ ಕೃತಿ ಸಾಕ್ಷಿಯಾಗಿದೆ ಎಂದರು. ವಿಭಿನ್ನ ಆಕಾರ, ಗಾತ್ರದ ದೃಷ್ಟಿಯಿಂದ ಗಮನಸೆಳೆಯುವ ಈ ಕೃತಿಯಲ್ಲಿ ಹೈದರಾಬಾದ ವಿಮೋಚನೆಗೆ ಹೋರಾಡಿದ ಮಹನೀಯರ ಕೊಡುಗೆ ಹಾಗೂ ಇತಿಹಾಸ ಒಳಗೊಂಡಿದ್ದು, ಯಾವುದೇ ಒಂದು ಜಾತಿ, ಧರ್ಮವನ್ನು ನಿಂದಿಸುವುದಾಗಲಿ ಅಥವಾ ಪ್ರೇರೇಪಿಸುವುದಾಗಿ ಮಾಡದೆ ಇತಿಹಾಸದ ಸತ್ಯ ಘಟನೆಗಳನ್ನು ಈ ಕೃತಿಯಲ್ಲಿ ಸಾಕ್ಷೀಕರಿಸಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು. ಹೈ.ಕ. ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಹಾಗೂ ಸಂಯೋಜಕ ನಾಗಣ್ಣ ಘಂಟಿ ಉದ್ಘಾಟಿಸಿದರು. ಕಾಲೇಜಿನ ಪ್ರಚಾರ್ಯ ಆರ್.ಬಿ. ಕೊಂಡಾ ಅಧ್ಯಕ್ಷತೆ ವಹಿಸಿದ್ದರು. ರೇಖಾ ಡಿ.ಟಿ. ನಿರೂಪಿಸಿದರು. ಡಾ. ಸುಭಾಶ್ಚಂದ್ರ ದೊಡ್ಡಮನಿ ವಂದಿಸಿದರು.

ಡಾ. ಮೋಹನರಾಜ ಪತ್ತಾರ, ಡಾ. ಮಹೇಶ ಗಂವ್ಹಾರ, ವಿಶ್ವನಾಥ ಡಿ, ಸುಷ್ಮಾ ಕುಲ್ಕರ್ಣಿ, ಡಾ. ಪ್ರೇಮಚಂದ ಚವ್ಹಾಣ, ಡಾ. ನಾಗರತ್ನ, ಕವಿತಾ ಎನ್ , ಶ್ರೇಯಸ್ ದೊಡ್ಡಮನಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಮಾನವ ಆರೋಗ್ಯ, ಆಹಾರ, ಕೃಷಿ, ಉದ್ಯಮ ಮತ್ತು ಪರಿಸರದಲ್ಲಿ ಸೂಕ್ಷ್ಮಜೀವಿಗಳ ಪಾತ್ರ ಪ್ರಮುಖ

ಕಲಬುರಗಿ: ಅಂತರರಾಷ್ಟ್ರೀಯ ಸೂಕ್ಷ್ಮಜೀವಿಗಳ ದಿನ 2026 ಅನ್ನು ಕಲಬುರಗಿಯ ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜಿನ ಸೂಕ್ಷ್ಮಜೀವಿಶಾಸ್ತ್ರ ವಿಭಾಗದಿಂದ 2026 ರ ಸೆಪ್ಟೆಂಬರ್ 17 ರಂದು ಆಚ–ರಿಸಲಾಯಿತು. ಮಾನವ ಆರೋಗ್ಯ, ಆಹಾರ, ಕೃಷಿ, ಉದ್ಯಮ ಮತ್ತು ಪರಿಸರದಲ್ಲಿ ಸೂಕ್ಷ್ಮಜೀವಿಗಳ ಮಹತ್ವ ಮತ್ತು ಅವುಗಳ ಪ್ರಮುಖ ಪಾತ್ರಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ಆರ್. ಬಿ. ಕೊಂಡಾ ಅವರು ವಹಿಸಿದ್ದರು. ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶಿಲ್ಪಾ ಬಂದ್ರಾಡ್ ಅವರು ಕಾರ್ಯಕ್ರಮವನ್ನು ಸಂಘಟಿಸಿದ್ದರು. "ಜೈವಿಕ ಭಯೋತ್ಪಾದನೆ ಮತ್ತು ಜೈವಿಕ ಸುರಕ್ಷತೆಯ ಸಮಸ್ಯೆಗಳು" ಎಂಬ ವಿಷಯದ ಕುರಿತು ವಿಶೇಷ ಆಹ್ವಾನಿತ ಉಪನ್ಯಾಸವನ್ನು ಏರ್ಪಡಿಸಲಾಗಿ–ತ್ತು. ಕಲಬುರಗಿಯ ಗುಲ್ಬರ್ಗಾ ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಚಂದ್ರಕಾಂತ್ ಕೆಳಮನಿ ಅವರು ಉಪನ್ಯಾಸ ನೀಡಿದರು. ಅವರು ಜೈವಿಕ ಸುರಕ್ಷತೆಯ ಮಹತ್ವ, ಸೂಕ್ಷ್ಮಜೀವಿಗಳ ಜವಾಬ್ದಾರಿಯುತ ನಿರ್ವಹಣೆ, ಪ್ರಯೋಗಾಲಯ ಸುರಕ್ಷತಾ ಕ್ರಮಗಳು ಮತ್ತು ಸಂಭಾವ್ಯ ಜೈವಿಕ ಬೆದರಿಕೆಗಳ ಬಗ್ಗೆ ಅರಿವು ಮೂಡಿಸಿದರು. ಆಚರಣೆಯ ಭಾಗವಾಗಿ ವಿವಿಧ ವಿದ್ಯಾರ್ಥಿ ಕೇಂದ್ರಿತ ಚಟುವಟಿಕೆಗಳನ್ನು ನಡೆಸಲಾಯಿತು. ಸೂಕ್ಷ್ಮಜೀವಿ ಪ್ರದರ್ಶನ: ಸೂಕ್ಷ್ಮಜೀವಿಗಳ ಅದ್ಭುತ ಜಗತ್ತು ಮತ್ತು ಅವುಗಳ ಅನ್ವಯಗಳನ್ನು ಪ್ರದರ್ಶಿಸಲು ಸೂಕ್ಷ್ಮಜೀವಿ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಪ್ರಯೋಜನಕಾರಿ ಮತ್ತು ಹಾನಿಕಾರಕ ಸೂಕ್ಷ್ಮಜೀವಿಗಳಿಗೆ ಸಂಬಂಧಿಸಿದ ಮಾದರಿಗಳು, ಚಾರ್ಟ್‌ಗಳು ಮತ್ತು ಮಾಹಿತಿ ಸಾಮಗ್ರಿಗಳನ್ನು ಪ್ರದರ್ಶಿಸಿದರು. ಸೂಕ್ಷ್ಮಜೀವಿಶಾಸ್ತ್ರ ಆಧಾರಿತ ಭಿತ್ತಿಪತ್ರ ರಚನಾ ಸ್ಪರ್ಧೆ: ಈ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಪರಿಕಲ್ಪನೆಗಳನ್ನು ಸೃಜನಾತ್ಮಕವಾಗಿ ವ್ಯಕ್ತಪಡಿಸಲು ಅವಕಾಶ ನೀಡಿತು. ಭಿತ್ತಿಪತ್ರಗಳು ಸೂಕ್ಷ್ಮಜೀವಿಗಳು, ಅವುಗಳ ವೈವಿಧ್ಯತೆ, ಅನ್ವಯಗಳು ಮತ್ತು ದೈನಂದಿನ ಜೀವನದಲ್ಲಿ ಅವುಗಳ ಮಹತ್ವವನ್ನು ಕೇಂದ್ರೀಕರಿಸಿದ್ದವು. ಹುದುಗಿಸಿದ ಆಹಾರ ಸ್ಪರ್ಧೆ: ಆಹಾರ ಉತ್ಪಾದನೆಯಲ್ಲಿ ಸೂಕ್ಷ್ಮಜೀವಿಗಳ ಪ್ರಾಯೋಗಿಕ ಮಹತ್ವವನ್ನು ತೋರಿಸಲು ಹುದುಗಿಸಿದ ಆಹಾರ ಸ್ಪರ್ಧೆಯನ್ನು ನಡೆಸಲಾಯಿತು. ವಿದ್ಯಾರ್ಥಿಗಳು ವಿವಿಧ ಸಾಂಪ್ರದಾಯಿಕ ಮತ್ತು ವಾಣಿಜ್ಯ ಹುದುಗಿಸಿದ ಆಹಾರಗಳನ್ನು ಪ್ರಸ್ತುತಪಡಿಸಿ, ಹುದುಗುವಿಕೆಯಲ್ಲಿ ಒಳಗೊಂಡಿರುವ ಸೂಕ್ಷ್ಮಜೀವಿಗಳ ಪಾತ್ರವನ್ನು ವಿವ–ರಿಸಿದರು.ಇducationಈಆಚರಣೆಯುವಿದ್ಯಾರ್ಥಿಗಳಿಗೆ ವರ್ಗದ ಆಚೆ ವೈಜ್ಞಾನಿಕ ಸಂವಹನ, ಸೃಜನಶೀಲತೆ ಮತ್ತು ಪ್ರಾಯೋಗಿಕ ಅರಿವಿನ ಮೂಲಕ ಸೂಕ್ಷ್ಮಜೀವಿಶಾಸ್ತ್ರವನ್ನು ಕಲಿಯಲು ಅವಕಾಶ ನೀಡಿತು. ಸೂಕ್ಷ್ಮಜೀವಿಗಳ ಮಹತ್ವ ಮತ್ತು ಅವುಗಳೊಂದಿಗೆ ಕೆಲಸ ಮಾಡುವಾಗ ಸುರಕ್ಷಿತ ಮತ್ತು ಜವಾಬ್ದಾರಿಯುತ ಅಭ್ಯಾಸಗಳ ಅಗತ್ಯತೆಯನ್ನು ಅರ್ಥಮಾಡಿ ಕೊಳ್ಳಲು ಈ ಕಾರ್ಯಕ್ರಮವು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿತು.

# ಅನಿಸುತಿದೆ ಯಾಕೋ ಇಂದು.. ನೀನಿಲ್ಲದೆ ಬದುಕಲಾರೆ ಗೆಳತಿ!

■ ಉದಯರಶ್ಮಿ ದಿನಪತ್ರಿಕೆ

ನನ್ನ ಬಾಳಿನ ದೇವತೆಗೆ,

ಕಚೇರಿಯ ನಾಲ್ಕು ಗೋಡೆಗಳ ನಡುವೆ, ಗಣಕಯಂತ್ರದ ಕೀಲಿಗಳ ಸದ್ದಿನ ಮಧ್ಯೆ ಹುಟ್ಟಿದ ನಮ್ಮ ಪ್ರೀತಿ, ಇಂದು ಹಸಿರ ಕಾನನದ ಮಡಿಲಲ್ಲಿ ಮಧುರ ಕಾವ್ಯವಾಗಿ ಅರಳಿದೆ. ನೀನು ಕೇವಲ ನನ್ನ ಸಹೋದ್ಯೋಗಿಯಲ್ಲ, ನನ್ನ ಬದುಕಿನ ಪ್ರತಿ ಪುಟದಲ್ಲೂ ಲಗೋರಿ ಆಟದಂತೆ ಖುಷಿ ತುಂಬಿದ ದೇವತೆ. ಕಾಡಿನ ಮರಗಳ ನಡುವೆ ಸೂರ್ಯನ ಕಿರಣಗಳು ಜಾರುವಾಗ, ನಿನ್ನ ಮೊಗದ ಮೇಲೆ ಮೂಡುವ ನಸುನಗು ನನ್ನ ಹೃದಯವನ್ನು ಲಗೋರಿಯ ಮೊದಲ ಕಲ್ಲಿನಂತೆ ಬಡಿದು ಉರುಳಿಸುತ್ತದೆ. ನಿನ್ನ ಆ ದಟ್ಟವಾದ ಮುಂಗುರುಳು, ತಂಗಾಳಿಗೆ ಸಿಕ್ಕಿ, ಕೆನ್ನೆಯನ್ನು ಸವರುವಾಗ, ಅರಣ್ಯದ ಒಟ್ಟು ಸೌಂದರ್ಯವೇ ನಿನ್ನಲ್ಲಿ ಬಂದು ನೆಲೆಸಿದಂತೆ ಭಾಸವಾಗುತ್ತದೆ. ಪ್ರಕೃತಿಯ ಹಸಿರು ಉಡುಪಿಗೆ ನಿನ್ನ ನಗುವೇ ಆಭರಣ. ಹಕ್ಕಿಗಳ ಚಿಲಿಪಿಲಿ ಧ್ವನಿಯೂ ನಿನ್ನ ಮಾತಿನ ಸವಿಗಾನದ ಮುಂದೆ ಮಂಕಾಗುತ್ತದೆ.

ನಿನ್ನ ಹುಟ್ಟುಹಬ್ಬದ ದಿನ ಮಾಣಿಕ್ಯ ಕೆಂಪಿನ ರೇಷ್ಮೆ ಸೀರೆಯನ್ನುಟ್ಟು ಬಂದಾಗ, ಕಚೇರಿಯ ಕಾಂಕ್ರೀಟ್ ಗೋಡೆಗಳ ನಡುವೆಯೂ ಸಿಂಗಾರಗೊಂಡ ವಸಂತವೇ ಧರೆಗಿಳಿದಂತೆ ಭಾಸವಾಯಿತು. ಚಿನ್ನದ ಕಸುಪಿನ ಅಂಚುಗಳು ನಿನ್ನ ಪ್ರತಿ ಹೆಜ್ಜೆಯಲ್ಲೂ ಮಿಂಚಿನಂತೆ ಹೊಳೆಯುತ್ತಿತ್ತು. ಸೀರೆಗಳ ತಕ್ಕಂತೆ ನೀನು ತೊಟ್ಟಿದ್ದ ಕರಾರುವಾಕ್ಕಾದ ಕಸೂತಿಯ ರವಿಕೆಯು ನಿನ್ನ ಗಂಭೀರ ಶಿಸ್ತಿಗೆ ಸಾಂಪ್ರದಾಯಿಕ ಕಳೆಯನ್ನು ನೀಡಿತ್ತು. ನೀಳ ಕುತ್ತಿಗೆಯಲ್ಲಿ ಮಿನುಗುವ ಚಿನ್ನದ ಸರ, ಕಿವಿಯಲ್ಲಿ ಅಲುಗಾಡುವ ಮುತ್ತಿನ ಜುಮುಕಿ ಹಾಗೂ ಕೈಬಳೆಗಳ ಸದ್ದು ನಿನ್ನ ವೃತ್ತಿಪರ ಮೌನಕ್ಕೆ ಕಾವ್ಯದ ನಾದವನ್ನು ತುಂಬಿತ್ತು. ಹಣೆಯ ಮೇಲಿನ ಅಂದದ ಬೊಟ್ಟು, ಕಣ್ಣಂಚಿನ ಕಾಡಿಗೆಯ ತೀಕ್ಷ್ಣ ನೋಟ ಮತ್ತು ತುಟಿಗಳ ಮೇಲೆ ಅರಳಿದ ಆ ಮುಗುಳು ನಗು ನಿನ್ನ ಸೌಂದರ್ಯವನ್ನು ಮುಗಿಲಿನ ಎತ್ತರಕ್ಕೆ ಕೊಂಡೊಯ್ದಿತ್ತು. ಹುಟ್ಟುಹಬ್ಬದ ಈ ವಿಶೇಷ ದಿನದಂದು ನಿನ್ನ ಆ ದೇವತೆಯಂತಹ ರೂಪವು ಎಲ್ಲರ ಕಣ್ಣಿಗೆ ಹಬ್ಬದಂತೆ ಕಂಡುಬಂತು.

ನೆನಪಿದೆಯೇ ಗೆಳತಿ? ಅಂದು ಆಫೀಸಿನಲ್ಲಿ ಅತ್ಯಂತ ಕಠಿಣವಾದ



ಪ್ರಾಜೆಕ್ಟ್ ಡೆಡ್‌ಲೈನ್ ಇದ್ದಾಗ, ಇಡೀ ಟೀಮ್ ಒತ್ತಡದಲ್ಲಿದ್ದಾಗ ನೀನು ನನಗೆ



ತಿಳಿಯದಂತೆ ನನ್ನ ಡೆಸ್ಕ್ ಮೇಲೆ ತಂದಿಟ್ಟ ಆ ಬಿಸಿ ಬಿಸಿ ಫಿಲ್ಟರ್ ಕಾಫಿ ಕಪ್! ಆ ಕಾಫಿಯ ಘಮಲಿಗಿಂತ ಹೆಚ್ಚಾಗಿ ನಿನ್ನ ಕಣ್ಣುಗಳಲ್ಲಿದ್ದ ಕಾಳಜಿ ನನ್ನ ಆಯಾಸವನ್ನೆಲ್ಲ ಮರೆಸಿತ್ತು. ಕ್ಯಾಫೆಟೇರಿಯಾದ ಆ ಮೂಲೆಯ ಸೀಟಿನಲ್ಲಿ ಕುಳಿತು, ಮ್ಯಾನೇಜರ್ ಬೈಗುಳಕ್ಕೆ ನಾವು ಒಟ್ಟಾಗಿ ನಗುತಿದ್ದ ಆ ಕ್ಷಣಗಳು




ಜಯಶ್ರೀ ಅಬ್ಬಿಗೇರಿ.
ಇಂಗ್ಲೀಷ ಉಪನ್ಯಾಸಕರು
ಬೆಳಗಾವಿ
ಮೊ: 9449234142

ಇಂದಿಗೂ ಹಸಿರು. ಲಂಚ್ ಬ್ರೇಕ್‌ನಲ್ಲಿ ಯಾರ ಕಣ್ಣಿಗೂ ಬೀಳದಂತೆ ಆಫೀಸ್ ಟೆರೇಸ್ ಮೇಲಿನ ಆ ಸಣ್ಣ ನೆರಳಿನಲ್ಲಿ ಕುಳಿತು, ನೀನು ತಂದಿದ್ದ ಬುತ್ತಿಯನ್ನು



ಹಂಚಿ ತಿನ್ನುವಾಗ, ನಾವಾಡುತ್ತಿದ್ದ ಆ ಮುದ್ದಾದ ಸರಸದ ಮಾತುಗಳು ನನ್ನ ದಿನದ ಅತ್ಯಂತ ಸುಂದರ ಕ್ಷಣಗಳಾಗಿದ್ದವು. "ನೀನು ನನ್ನ ಪಾರ್ಟ್ನರ್ ಆಗದಿದ್ದರೆ ಮ್ಯಾನೇಜರ್‌ಗೆ ಕಂಪ್ಲೇಂಟ್ ಮಾಡ್ತೀನಿ" ಎಂದು ನೀನು ಕಣ್ಣು ಮಿಟುಕಿಸಿ ರೇಗಿಸುತ್ತಿದ್ದ ಆ ಚೇಷ್ಟೆ ಇಂದಿಗೂ ನನ್ನನ್ನು ನಗಿಸುತ್ತದೆ. ಟೀಮ್ ಮೀಟಿಂಗ್ ಮುಗಿದ ತಕ್ಷಣ ಸಿಕ್ರೆಟ್ ಆಗಿ ಮೆಸೇಜ್ ಕಳುಹಿಸಿ ಕಾಫಿ ಮಷೀನ್ ಹತ್ತಿರ ಸಿಗಲು ಕೋರುತ್ತಿದ್ದ ನಿನ್ನ ಆ ಕಣ್ಣ ಸನ್ನೆಯ ಮಧುರ ನೆನಪುಗಳು ಇಂದಿಗೂ ನನ್ನ ಎದೆಯಲ್ಲಿ ಹಸಿರಾಗಿವೆ. ಅಂದು ಪ್ರಸೆಂಟೇಶನ್ ಕೊಡುವಾಗ ನನ್ನ ತಪ್ಪುಗಳನ್ನು ನೀನು ನಿನ್ನ ಮುಗುಳ್ನಗೆಯಿಂದಲೇ ಸರಿಪಡಿಸಿ ಬೆಂಬಲವಾಗಿ ನಿಂತಾಗ, ಈ ಜಗತ್ತನ್ನು ಗೆಲ್ಲುವ ಧೈರ್ಯ ನನಗೆ ಬಂದಿತ್ತು. ಇನ್-ಟೈಮ್ ಕೆಲಸ ಮುಗಿಸಿ ಒಟ್ಟಿಗೆ ಲಾಗ್-ಔಟ್ ಮಾಡಿ, ಮಳೆಯ ಸಂಜೆ ಮೆಟ್ರೋ ಸ್ಟೇಷನ್‌ಗೆ ಒಂದೇ ಕೊಡೆಯಡಿ ನಡೆದ ಆ ನೆನಪು ಇಂದಿಗೂ ನನ್ನನ್ನು ರೋಮಾಂಚನಗೊಳಿಸುತ್ತಿದೆ.

ಮಂಜು ಮುಸುಕಿದ ಮುಂಜಾವಿನ ಆ ತಿಳಿ ಹಸಿರು ಕಾಡಿನಲ್ಲಿ, ಬಿದಿರು



ಮೆಳೆಗಳು ತಂಗಾಳಿಗೆ ಸಿಕ್ಕಿ ಸೀಟಿಯೊತ್ತಿ ಹಾಡುವಾಗ, ನಿನ್ನ ಕೈಹಿಡಿದು ಹೆಜ್ಜೆ ಇಡುವುದೆಂದರೆ ಅದೊಂದು ಸ್ವರ್ಗೀಯ ಅನುಭೂತಿ. ಕಾಡಿನ ನಡುವೆ ಅಲೆಯುವ ಆ ಕಾಡು ತೊರೆಯ ಕಚ್ಚಾ ಹಾದಿಯಲ್ಲಿ, ಕಲ್ಲು ಮುಳ್ಳುಗಳ ನಡುವೆ ನೀನು ಸಮತೋಲನ ಕಾಯ್ದುಕೊಳ್ಳಲು ಹೆಣಗಾಡುತ್ತಾ ನನ್ನ ತೋಳನ್ನು ಗಟ್ಟಿಯಾಗಿ ಆಶ್ರಯಿಸಿದಾಗ, ನನ್ನ ಇಡೀ ಜನ್ಮ ಸಾರ್ಥಕವಾಯಿತು ಎನಿಸಿತು. ಆ ಕಾಡು ಹಾದಿಯ ಅಂಕುಡೊಂಕಾದ ಕಲ್ಲುಗಳ ಮೇಲೆ ನೀನು ಆಯತಪ್ಪಿ ಬೀಳುವಂತೆ ನಟಿಸಿ ನನ್ನನ್ನು ಇನ್ನಷ್ಟು ಹತ್ತಿರ ಸೆಳೆಯುತ್ತಿದ್ದ ಆ ನಯವಂಚಕ ಆಟ ನನ್ನ ಹೃದಯದ ಲಗೋರಿಯನ್ನು ಸಂಪೂರ್ಣವಾಗಿ ಗೆದ್ದುಕೊಂಡಿತು. ಮಳೆಬಿಲ್ಲು ಕಾಡಿನ ಮರಗಳ ಮೇಲೆ ಬಾಗಿ ನಿಂತಾಗ, ನಿನ್ನ ಕಣ್ಣುಗಳಲ್ಲಿ ಮೂಡುವ ಆ ಕಾತುರ ನನ್ನನ್ನು ದಿನವೂ ಹೊಸದಾಗಿ ಪ್ರೀತಿಸುವಂತೆ ಮಾಡುತ್ತದೆ. ಒಮ್ಮೆ ಕಾಡಿನ ಹಾದಿಯಲ್ಲಿ ಹಠಾತ್ತನೆ ಮಳೆ ಸುರಿದಾಗ, ನೀನು ನಿನ್ನ ದುಪಟ್ಟಾವನ್ನು ಇಬ್ಬರಿಗೂ ಛತ್ರಿಯಾಗಿ ಹಿಡಿದು ನಿಂತ ಆ ಕ್ಷಣ ನನ್ನ ನೆನಪಿನ ಬುತ್ತಿಯಲ್ಲಿ ಶಾಶ್ವತ. ಜಿನುಗುವ ಹನಿಗಳಿಗಿಂತ ನಿನ್ನ ಕೆನ್ನೆಯ ಮೇಲಿನ ನೀರಿನ ಹನಿಗಳೇ ಹೆಚ್ಚು ಹೊಳೆಯುತ್ತಿದ್ದವು. ಕಚೇರಿಯ ಕಡತಗಳ ಗಡಿಬಿಡಿಯಿಂದ ದೂರ ಬಂದು, ಕಾಡಿನ ಮೌನದಲ್ಲಿ ನೀನು ನನ್ನ ಹೆಗಲ ಮೇಲೆ ತಲೆಯಿಟ್ಟು ಕುಳಿತಾಗ ಜಗತ್ತಿನ ಎಲ್ಲ ಕೋಲಾಹಲಗಳೂ ಸ್ತಬ್ಧವಾದಂತೆ ಅನಿಸಿತು. ಒಣಗಿದ ಎಲೆಗಳ ಮೇಲೆ ಜೊತೆಯಾಗಿ ಹೆಜ್ಜೆ ಇಡುತ್ತಾ, ಕಲ್ಲುಗಳನ್ನು ಒಂದರ ಮೇಲೊಂದಿಟ್ಟು ಲಗೋರಿ ಆಟವಾಡಿ, ಸೋತಾಗ ನೀನು ಮುನಿಸಿಕೊಂಡು ನಗುವ ಆ ಚಂದವನ್ನು ವರ್ಣಿಸಲು ಪದಗಳೇ ಸಾಲವು.

ಅಂದು ಕಾಡಿನ ನಡುವಿನ ಸಣ್ಣ ತೊರೆಯನ್ನು ದಾಟುವಾಗ ಭಯದಿಂದ ನೀನು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದಿದ್ದೆ. ಆ ಸ್ಪರ್ಶ ನನ್ನ ಇಡೀ ಜನ್ಮಕ್ಕೆ ನಿಶ್ಚಿಂತೆಯ ಭಾವ ನೀಡಿತು. ಮುಸ್ಸಂಜೆಯ ಹೊತ್ತಿಗೆ ಮರಗಳ ಮರೆಯಿಂದ ಕಾಡುಹಕ್ಕಿಗಳು ಗೂಡಿಗೆ ಮರಳುವಾಗ, ನೀನು ಪ್ರಕೃತಿಯ ಮೌನಕ್ಕೆ ಧ್ವನಿಯಾಗುತ್ತಾ ಹಳೇ ಹಾಡೊಂದನ್ನು ಗುಣುಗುಣಿಸಿದ್ದೆ. ಬದುಕಿನ ಏರಿಳಿತಗಳ ಲಗೋರಿ ಆಟದಲ್ಲಿ, ಬಿದ್ದ ಕಲ್ಲುಗಳನ್ನು ಮತ್ತೆ ಜೋಡಿಸಿ ಗೆಲ್ಲುವ ಭರವಸೆ ನಿನ್ನ ಕಣ್ಣುಗಳಲ್ಲಿ ನನಗೆ ಕಾಣಿಸುತ್ತಿತ್ತು. ಈ ಸುಂದರ ಕಾಡಿನ ಮೌನ ಸಾಕ್ಷಿಯಾಗಿ, ಪ್ರಕೃತಿಯ ತಂಪಾದ ಮಡಿಲಲ್ಲಿ ನಾವಿಬ್ಬರೂ ಒಂದು ಮಹತ್ವದ

ತೀರ್ಮಾನಕ್ಕೆ ಬಂದೆವು. ಸದಾ ಕಾಲ ಹೀಗೆಯೇ ಒಂದಾಗಿರಲು, ನಮ್ಮ ಪ್ರೀತಿಯನ್ನು ಮದುವೆಯ ಬಂಧದೊಂದಿಗೆ ಅಮರವಾಗಿಸಲು ನಿರ್ಧರಿಸಿವು. ಕಚೇರಿಯ ನೆನಪಿನಿಂದ ಆರಂಭವಾಗಿ ಕಾಡಿನ ಹಸಿರಿನಲ್ಲಿ ಬೆಳೆದ ನಮ್ಮ ಒಲವು, ಇನ್ನು ಸಂಸಾರದ ಸುಂದರ ನಂದನವನವಾಗಲಿದೆ.

"ಲಗೋರಿ ಆಟದ ಕಲ್ಲುಗಳಂತೆ ಒಂದೊಂದಾಗಿ ಜೋಡಿಸಿ ಕಟ್ಟಿದ ನಮ್ಮ ಒಲವಿನ ಅರಮನೆಗೆ ಈಗ ಮಂಗಲ ಮುಹೂರ್ತದ ಸಂಭ್ರಮ."ಕಚೇರಿಯ ಲಾಗ್-ಇನ್ ಸಮಯದಿಂದ ಆರಂಭವಾಗಿ, ಕಾಡಿನ ಹಸಿರ ಹಾದಿಯಲ್ಲಿ ಚಿಗುರಿದ ನಮ್ಮ ಪ್ರೀತಿಯ ಪಯಣವೀಗ ಹಸೆಮಣೆಯತ್ತ ಸಾಗುತ್ತಿದೆ. ಪ್ರಕೃತಿಯ ಸಾಕ್ಷಿಯಾಗಿ ನಾವು ತಗೆದುಕೊಂಡ ಈ ಮದುವೆಯ ನಿರ್ಧಾರಕ್ಕೆ ನಿಮ್ಮ ಹರಕೆ ಮತ್ತು ಹಾರೈಕೆಗಳೇ ಆಶೀರ್ವಾದ.

ಹಚ್ಚ ಹಸಿರಿನ ಪ್ರಕೃತಿಯ ಮಡಿಲಲ್ಲಿರುವ, ಹಕ್ಕಿಗಳ ಚಿಲಿಪಿಲಿ ಗಾನ ಹಾಗೂ ಸುಂದರ ತಂಗಾಳಿ ಬೀಸುವ "ಕಾನನ ರೇಷ್ಮೆ ಕಲ್ಯಾಣ ಮಂಟಪ, "ಇಲ್ಲಿ ನೆರವೇರುವ ನಮ್ಮ ಮದುವೆಯ ಶುಭ ಮುಹೂರ್ತಕ್ಕೆ ಹಾಗೂ ಮಂಗಲ ರಿಸೆಪ್ಷನ್ ಸಂಭ್ರಮಕ್ಕೆ ನಿಮ್ಮನ್ನು ನಿಮ್ಮ ಇಡೀ ಕುಟುಂಬ ಸಮೇತರಾಗಿ ಪ್ರೀತಿಯಿಂದ ಆಹ್ವಾನಿಸುತ್ತಿದ್ದೇವೆ. ಬನ್ನಿ, ನಮ್ಮ ಪ್ರೀತಿಯ ಹೊಸ ಇನ್ನಿಂಗ್ಸ್ ಶುಭಾರಂಭದ ಸಂಭ್ರಮವನ್ನು ಹರಸಿ ಹಾರೈಸಿ ಎಂದು ಕಚೇರಿ ಬಳಗವನ್ನು ಕರೆದಿದ್ದೇನೆ. ನೀನೂ ಬಂದು ಬಿಡು ನವ ವಧುವಾಗಿ ಕಾಯುತ್ತಿದ್ದೇನೆ.

ನಿನಗಾಗಿ
ಹೊಸ ಬಾಳಿನ ಗೆಳೆಯನಾಗಿ

## ಸೆ.22 ರಿಂದ ಅನಿರ್ದಿಷ್ಟ ದಿನಗಳು ಹೆದ್ದಾರಿ ಬಂದ್



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನ ಜೋಡಗುಡಿ ಹತ್ತಿರ ಇಂಡಿ ವಿಜಯಪುರ ರಾಜ್ಯ ಹೆದ್ದಾರೆ ಮತ್ತು ಅಕ್ಕಲಕೋಟ ವಿಜಯಪುರ ಹೆದ್ದಾರಿ ಯನ್ನು ಬಂದು ಮಾಡಿ ಭಾರತೀಯ ಕಿಸಾನ ಸಂಘದ ವತಿಯಿಂದ ಅನಿರ್ದಿಷ್ಟ ಸಮಯದವರೆಗೆ ಬಂದ್ ಮಾಡಲಾಗುವದೆಂದು ಭಾರತೀಯ ಕಿಸಾನ ಸಂಘದ ಉತ್ತರ ಪ್ರಾಂತ ಮಾಜಿ ಅಧ್ಯಕ್ಷ ಗುರುನಾಥ ಬಗಲಿ ಹೇಳಿದರು.

ನಗರದ ಶ್ರೀ ಶಾಂತೇಶ್ವರ ಮಂಗಲ ಕಾರ್ಯಾಲಯದಲ್ಲಿ ಭಾರತೀಯ ಕಿಸಾನ ಸಂಘದ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.ಇಂಡಿ ತಾಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಸರಕಾರ ಘೋಷಿಸಬೇಕು, ತಾಲೂಕಿನಲ್ಲಿರುವ ಎಲ್ಲ ಕೆರೆಗಳನ್ನು ತುಂಬಬೇಕು ಅಲ್ಲಿಯವರೆಗೆ ಹೋರಾಟ ಮಾಡಲಾಗುವುದೆಂದು ಬಗಲಿ ಹೇಳಿದರು. ಇನ್ನೋರ್ವ ಮುಖಂಡ ಮಲ್ಲನಗೌಡ ಪಾಟೀಲ ಮಾತನಾಡಿ, ಎನ್ ಟಿ ಪಿಸಿ ಯಲ್ಲಿ ಉತ್ಪಾದನೆಯಾಗುವ ಎಲ್ಲ ವಿದ್ಯುತ್ ಮಹಾರಾಷ್ಟ್ರ ಮತ್ತು ಮುಂಬಯಿ ಪ್ರದೇಶಕ್ಕೆ ಮಾರುತ್ತಾರೆ. ಕರ್ನಾಟಕ ವಿಜಯಪುರ ಮತ್ತು ಇನ್ನಿತರ ಜಿಲ್ಲೆಗಳಿಗೆ ಅನುಕೂಲವಾಗಲೆಂದು ಎನ್ ಟಿ ಪಿ ಸಿ ಮಾಡಿದ್ದು ಇಲ್ಲಿಯ ಅನೇಕ ರೈತರ ಜಮೀನು ಹಾಳಾಗಿದೆ, ಆದರೆ ವಿದ್ಯುತ್ ಮಾತ್ರ ಬೇರೆ ರಾಜ್ಯಕ್ಕೆ ನೀಡುವುದು ಕರ್ನಾಟಕ ರೈತರ ದುರ್ದೈವ ಎಂದರು.

ಶಂಕರೆಪ್ಪ ರೂಗಿ ತಡವಲಗಾ, ಈರಪ್ಪ ಗೋಟ್ಯಾಳ ತಡವಲಗಾ, ಪ್ರಕಾಶ ಬಿರಾದಾರ ಲಮಾಣಿ ಹಟ್ಟಿ, ಎಸ್.ಟಿ.ಪಾಟೀಲ ನಾದ, ಶಿವರಾಯ ಬಿರಾದಾರ, ಮಹಿಬೂಬ ಮುಲ್ಲಾ, ಚಿದಾನಂದ ಮದರಿ ಮತ್ತಿತರಿದ್ದರು.

## ಜಿಲ್ಲೆಯ 10 ತಾಲೂಕುಗಳು ಬರಪೀಡಿತವೆಂದು ಘೋಷಣೆ

■ ಉದಯರಶ್ಮಿ ದಿನಪತ್ರಿಕೆ



■ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ವಿಜಯಪುರ ಜಿಲ್ಲೆ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿಕೆ

ವಿಜಯಪುರ: ಜಿಲ್ಲೆಯ ಮುದ್ದೇಬಿಹಾಳ, ಸಿಂದಗಿ, ಆಲಮೇಲ ಮತ್ತು ದೇವರಹಿಪ್ಪರಗಿ ತಾಲೂಕುಗಳು ಬರಪೀಡಿತ ತಾಲೂಕುಗಳು ಎಂದು ಕೇಂದ್ರ ಸರಕಾರದ ನಿಯಮಾವಳಿಗಳ ಪ್ರಕಾರ ರಾಜ್ಯ ಸರಕಾರದಿಂದ ಘೋಷಣೆ ಮಾಡಲಾಗಿದೆ ಎಂದು ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ವಿಜಯಪುರ ಜಿಲ್ಲೆ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಈ ಘೋಷಣೆಯಿಂದಾಗಿ ವಿಜಯಪುರ ಜಿಲ್ಲೆಯ 13 ತಾಲೂಕುಗಳ ಪೈಕಿ ಒಟ್ಟು 10 ತಾಲೂಕುಗಳು ಬರಪೀಡಿತ ಎಂದು ಘೋಷಣೆ ಆಗಿದ್ದು, ಇಂಡಿ, ಚಡಚಣ ಮತ್ತು ತಾಳಿಕೋಟೆ ತಾಲೂಕುಗಳು ಮುಂದಿನ ದಿನಗಳಲ್ಲಿ ನಿಯಮಾವಳಿಗಳ ಅನುಸಾರ ಘೋಷಣೆ ಆಗಲಿವೆ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಈ ವರ್ಷ ತೀವ್ರ ಮಳೆ ಅಭಾವದಿಂದ ವಿಜಯಪುರ ಜಿಲ್ಲೆಯಲ್ಲಿ ಬರದ ಛಾಯೆ ಆವರಿಸಿದ್ದು, ಸಂಪೂರ್ಣ ಜಿಲ್ಲೆಯು ಬರಪೀಡಿತವಾಗಿದೆ. ಆದರೆ, ಕೇಂದ್ರ ಸರಕಾರದ ನಿಯಮಾವಳಿಗಳ ಅನುಸಾರ ಕಾಲ-ಕಾಲಕ್ಕೆ ಸೆಟಲೈಟ್ ಮಾಹಿತಿ ಅನುಸಾರ ಬರಪೀಡಿತ ತಾಲೂಕುಗಳನ್ನು ಘೋಷಣೆ ಮಾಡಲಾಗುತ್ತಿದ್ದು, ಅದರನ್ವಯ ಇಂದು ರಾಜ್ಯದಲ್ಲಿ ಹೊಸದಾಗಿ 53 ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಲಾಗಿದ್ದು, ಅದರಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ, ಆಲಮೇಲ ಮತ್ತು ದೇವರಹಿಪ್ಪರಗಿ ತಾಲೂಕುಗಳು ಮಧ್ಯಮ ಬರಪೀಡಿತ ಎಂದು ಸಿಂದಗಿ ತಾಲೂಕನ್ನು ಕಠಿಣ ಬರಪೀಡಿತ ತಾಲೂಕು ಎಂದು ಘೋಷಿಸಲಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ರಾಜ್ಯ ಸರಕಾರ ವಿಶೇಷವಾಗಿ ನಮ್ಮ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಆದ್ದರಿಂದ ಬರಪೀಡಿತ ಎಂದು ಘೋಷಿಸುವಂತೆ ವಿವಿಧ ತಾಲೂಕುಗಳಲ್ಲಿ ರೈತ ಸಂಘಟನೆಗಳು ಹಮ್ಮಿಕೊಂಡಿರುವ ಹೋರಾಟಗಳನ್ನು ಸ್ಥಗೀತಗೊಳಿಸಬೇಕು ಎಂದು ಸಚಿವ ಎಂ.ಬಿ.ಪಾಟೀಲ ವಿನಂತಿಸಿದ್ದಾರೆ.

## ಅಥಣಿಯಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಉದ್ಘಾಟನೆ

■ ಉದಯರಶ್ಮಿ ದಿನಪತ್ರಿಕೆ



ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಅಭಿಮತ

ಅಥಣಿ: ವಿದ್ಯಾರ್ಥಿಗಳಲ್ಲಿ ಕೌಶಲ್ಯಾಭಿವೃದ್ಧಿ, ಆತ್ಮವಿಶ್ವಾಸ ಹಾಗೂ ಉದ್ಯೋಗಾರ್ಹತೆಯನ್ನು ಹೆಚ್ಚಿಸುವ ಉದ್ದೇಶದಿಂದ ಅಥಣಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ದೇಶಪಾಂಡೆ ಸ್ಕಿಲ್ಲಿಂಗ್ ಸಹಯೋಗದಲ್ಲಿ ಆರ್ ಸಿ ಯು - ಏಪ್ ಈ ಎಸ್ ಎಮ್ ಎ (ಫೆಸ್ಮಾ)ಖ3 ಬ್ಯಾಚ್‌ನ ಉದ್ಘಾಟನೆ ಹಾಗೂ ಪೋಷಕರ ಸಭೆ ಯಶಸ್ವಿಯಾಗಿ ನಡೆಯಿತು.

ಬಿಎ ಬಿಕಾಂ ಬಿಸಿಎ ಹಾಗೂ ಬಿಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಕೌಶಲ್ಯಾಧಾರಿತ ತರಬೇತಿ ಪಡೆಯುವ ಅಗತ್ಯದ ಕುರಿತು ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಉದ್ಯೋಗ ಘಟಕದ ಸಹ-ಸಂಯೋಜಕರಾದ ಡಾ.ಶಿಲ್ಪಾ ರಾಮನ್ನಗೊಳ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣದೊಂದಿಗೆ ಉದ್ಯೋಗ ಕ್ಷೇತ್ರಕ್ಕೆ ಅಗತ್ಯವಿರುವ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಸಂತೋಷ್ ಉಂಡಾಡಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶೈಕ್ಷಣಿಕ ಅರ್ಹತೆಯೊಂದಿಗೆ ಸಂವಹನ ಕೌಶಲ್ಯ, ನಾಯಕತ್ವ ಗುಣ, ತಾಂತ್ರಿಕ ಜ್ಞಾನ ಹಾಗೂ ವ್ಯಕ್ತಿತ್ವ ವಿಕಸನಕ್ಕೂ ವಿದ್ಯಾರ್ಥಿಗಳು ಆದ್ಯತೆ ನೀಡಬೇಕು. ತರಬೇತಿಯ ಸಂಪೂರ್ಣ ಪ್ರಯೋಜನ ಪಡೆದುಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಆರ್ ಸಿ ಯು ಏಪ್ ಈ ಎಸ್ ಎಮ್ ಎ ತರಬೇತುದಾರರಾದ ಸ್ಪಂದನಾ ಎಸ್.ಜೆ. ಮಾತನಾಡಿ, ವಿದ್ಯಾರ್ಥಿಗಳ ಕೌಶಲ್ಯಗಳನ್ನು ಗುರುತಿಸಿ ಅವುಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸುವುದು ತರಬೇತಿಯ ಪ್ರಮುಖ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿಲಾಸ್ ಕಾಂಬಳೆ ಮಾತನಾಡಿ, ಪ್ರಸ್ತುತ ಉದ್ಯೋಗ ಕ್ಷೇತ್ರದಲ್ಲಿ ಪದವಿಯ ಜೊತೆಗೆ ಕೌಶಲ್ಯಕ್ಕೂ ಹೆಚ್ಚಿನ ಮಹತ್ವವಿದೆ. ವಿದ್ಯಾರ್ಥಿಗಳು ಈ ತರಬೇತಿ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ವೃತ್ತಿಜೀವನಕ್ಕೆ ಭದ್ರ ಬುನಾದಿ ಹಾಕಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿ ಬಿ ಮಠಪತಿ, ಪರಶುರಾಮ ತಕತರಾವ, ಸುರೇಖಾ ದೇವರಡ್ಡಿ, ಅಪ್ಪು ಮಾದರ, ಶಿವಾನಂದ ಹೊಸಮನಿ, ರಾಜು ಭಜಂತ್ರಿ, ಮಲ್ಲಿಕಾರ್ಜುನ ಪಾಟೀಲ, ತರಬೇತುದಾರರಾದ ವಂದನಾ ಎಸ್ ಪಿ, ಸ್ಪಂದನಾ ಎಸ್ ಜೆ ಸೇರಿದಂತೆ ಹಲವರಿದ್ದರು.

## ನಿವರಗಿ ಗ್ರಾಮಕ್ಕೆ ಹೆಮ್ಮೆ ತಂದ ನಾಲ್ವರು ಪ್ರತಿಭಾವಂತರು

■ ಉದಯರಶ್ಮಿ ದಿನಪತ್ರಿಕೆ

■ ವೈದ್ಯರ ತವರೂರಾಗುತ್ತಿದೆ ಚಡಚಣ ತಾಲೂಕಿನ ನಿವರಗಿ ಗ್ರಾಮ । ಒಂದೇ ಗ್ರಾಮದಲ್ಲಿ ನಾಲ್ವರಿಗೆ ಎಮ್‌ಬಿಬಿಎಸ್ ಪ್ರವೇಶ



ಚಡಚಣ: ಪ್ರತಿಭೆ, ಪರಿಶ್ರಮ ಹಾಗೂ ಛಲಕ್ಕೆ ಗ್ರಾಮೀಣ ಹಿನ್ನೆಲೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಚಡಚಣ ತಾಲೂಕಿನ ನಿವರಗಿ ಗ್ರಾಮದ ನಾಲ್ವರು ಪ್ರತಿಭಾವಂತ ವಿದ್ಯಾರ್ಥಿಗಳು ಸಾಬೀತುಪಡಿಸಿದ್ದಾರೆ.

ಒಂದೇ ವರ್ಷದಲ್ಲಿ ಗ್ರಾಮದ ನಾಲ್ವರು ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಲ್ಲಿ ಎಮ್‌ಬಿಬಿಎಸ್ ಅರ್ಹತೆ ಪಡೆದು ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಎಮ್‌ಬಿಬಿಎಸ್ ಪ್ರವೇಶ ಪಡೆಯುವ ಮೂಲಕ ಗ್ರಾಮಕ್ಕೆ ಹೆಮ್ಮೆ ತಂದಿದ್ದಾರೆ. ನಿವರಗಿ ಗ್ರಾಮದ ವಿದ್ಯಾರ್ಥಿಗಳಾದ ನೂತನ ಬಸವರಾಜ ಹಳದಕಿ ಅವರು ಬಾಗಲಕೋಟೆಯ ಎಸ್. ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಲ್ಲಿ ಎಮ್‌ಬಿಬಿಎಸ್ ವ್ಯಾಸಂಗಕ್ಕೆ ಪ್ರವೇಶ ಪಡೆದಿದ್ದಾರೆ. ಅಮಿತ್‌ಗೌಡ ಸಂಗನಗೌಡ ಪಾಟೀಲ ಅವರು ಮಹಾರಾಷ್ಟ್ರದ ಸಾಂಗ್ಲಿಯ ಭಾರತಿ ವಿದ್ಯಾಪೀಠ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆಯಾಗಿದ್ದಾರೆ.

ಅದೇ ರೀತಿ ಗೌರಿಶಂಕರ ಮಲ್ಲಿಕಾರ್ಜುನ ಪೊಲಾದಿ ಅವರು ಮಂಡ್ಯದ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿ ಹಾಗೂ ಸಿಂಚನಾ ಯಲ್ಲಪ್ಪ ಬಗಲಿ ಅವರು ಗದಗ ಮೆಡಿಕಲ್ ಕಾಲೇಜಿನಲ್ಲಿ ಎಮ್‌ಬಿಬಿಎಸ್ ವ್ಯಾಸಂಗಕ್ಕೆ ಪ್ರವೇಶ ಪಡೆದಿದ್ದಾರೆ. ಒಂದೇ ವರ್ಷದಲ್ಲಿ ಒಂದೇ ಗ್ರಾಮದ ನಾಲ್ವರು ವಿದ್ಯಾರ್ಥಿಗಳು ನೀಟ್ ಮೂಲಕ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿರುವುದು ನಿವರಗಿ ಗ್ರಾಮದ ಶೈಕ್ಷಣಿಕ ಸಾಧನೆಗೆ ಮತ್ತೊಂದು ಗರಿ ಮೂಡಿಸಿದೆ.

ಶಿಕ್ಷಕರ ಗ್ರಾಮವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಿವರಗಿ ಗ್ರಾಮ ಇದೀಗ ವೈದ್ಯರನ್ನು ರೂಪಿಸುವ ತವರೂರಾಗಿಯೂ ಗುರುತಿಸಿಕೊಳ್ಳುತ್ತಿರುವುದು ಗ್ರಾಮಸ್ಥರಲ್ಲಿ ಹೆಮ್ಮೆಯ ಭಾವ ಮೂಡಿಸಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ನಿವರಗಿ ಗ್ರಾಮದ ನೌಕರರ ಬಳಗ, ಗ್ರಾಮಸ್ಥರು ಹಾಗೂ ಹಿರಿಯರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

## ಯುಪಿಐ ವಹಿವಾಟಿನ ಮೇಲಿನ ತೆರಿಗೆಗೆ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ



■ ಕೇಂದ್ರ ಸರ್ಕಾರದ ವಿರುದ್ಧ ಸಿಡಿದೆದ್ದ ಮುಖಂಡ ಮಂಜುನಾಥ ಸುಣಗಾರ

ಬೆಂಗಳೂರು: ಯುಪಿಐ (ಗಕಖ) ಡಿಜಿಟಲ್ ಪಾವತಿ ವಹಿವಾಟುಗಳ ಮೇಲೆ ತೆರಿಗೆ ಮತ್ತು ವಹಿವಾಟು ಶುಲ್ಕ ವಿಧಿಸಲು ಹೊರಟಿರುವ ಕೇಂದ್ರ ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿ ಮಂಜುನಾಥ ಸುಣಗಾರ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರದ ಈ ಹಠಾತ್ ನಿರ್ಧಾರದಿಂದಾಗಿ ಬೀದಿ ಬದಿ ವ್ಯಾಪಾರಿಗಳು, ಮೀನುಗಾರರು ಹಾಗೂ ಅಸಂಘಟಿತ ವಲಯದ ಶ್ರಮಿಕರು ತೀವ್ರ ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ಈ ಕ್ರಮ ಬೀದಿ ಬದಿ ವ್ಯಾಪಾರಿಗಳು ಮತ್ತು ಮೀನುಗಾರರಿಗೆ ಕುತ್ತು ತರಲಿದೆ. ತರಕಾರಿ ಮಾರಾಟಗಾರರು, ಸಣ್ಣ ಅಂಗಡಿದಾರರು, ಬೀದಿ ಬದಿ ಶ್ರಮಿಕರು ಮತ್ತು ಮೀನುಗಾರರು ದಿನನಿತ್ಯದ ನಗದು ರಹಿತ ಸಣ್ಣ ವಹಿವಾಟುಗಳಿಗೆ ಗಕಖ ಪಾವತಿಯನ್ನೇ ನೆಚ್ಚಿಕೊಂಡಿದ್ದಾರೆ. ಈಗ ಇಂತಹ ಸಣ್ಣ ವಹಿವಾಟುಗಳ ಮೇಲೆಯೂ ತೆರಿಗೆ ಮತ್ತು ಸೇವಾ ಶುಲ್ಕದ ಹೊರೆ ಹೊರಿಸಿದರೆ ಅವರ ಹೊಟ್ಟೆಮೇಲೆ ಹೊಡೆದಂತಾಗುತ್ತದೆ ಎಂದಿದ್ದಾರೆ.

ದಿನಗೂಲಿ ನೌಕರರು ಮತ್ತು ಅಸಂಘಟಿತ ವಲಯದ ಕಾರ್ಮಿಕರ ಸಣ್ಣ ಪ್ರಮಾಣದ ಆದಾಯದ ಮೇಲೆಯೂ ತೆರಿಗೆಯ ಕಣ್ಣು ಬಿದ್ದಿರುವುದು ಖಂಡನೀಯ. ಡಿಜಿಟಲ್ ಕ್ರಾಂತಿಯ ಹೆಸರಿನಲ್ಲಿ ಶ್ರಮಿಕರ ಶ್ರಮದ ಹಣವನ್ನು ಕಸಿಯಲು ಸರ್ಕಾರ ಹೊರಟಿದೆ ಎಂದಿದ್ದಾರೆ.

ದೇಶವನ್ನು "ಡಿಜಿಟಲ್ ಇಂಡಿಯಾ" ಮಾಡುತ್ತೇವೆ ಎಂದು ಹೇಳಿ, ಸಾರ್ವಜನಿಕರನ್ನು ನಗದು ರಹಿತ ಪಾವತಿಗೆ ಅಭ್ಯಾಸ ಮಾಡಿಸಿ, ಈಗ ಏಕಾಏಕಿ ತೆರಿಗೆ ಹಾಗೂ ಉಖಖ ವಿಧಿಸುತ್ತಿರುವುದು ಸಾರ್ವಜನಿಕರಿಗೆ ಹಾಗೂ ಸಣ್ಣ ವ್ಯಾಪಾರಿಗಳಿಗೆ ಎಸಗುತ್ತಿರುವ ಮೋಸ. ಸರ್ಕಾರ ತಕ್ಷಣವೇ ಈ ತೆರಿಗೆ ಮತ್ತು ಶುಲ್ಕ ವಿಧಿಸುವ ಪ್ರಸ್ತಾವನೆಯನ್ನು ಕೈಬಿಡಬೇಕು. ಸಣ್ಣ ವ್ಯಾಪಾರಿಗಳು, ಮೀನುಗಾರರು ಮತ್ತು ಅಸಂಘಟಿತ ವಲಯದ ಶ್ರಮಿಕರ ಹಿತವನ್ನು ಕಾಯದಿದ್ದರೆ ದೇಶಾದ್ಯಂತ ಬೀದಿಗಿಳಿದು ತೀವ್ರ ಹೋರಾಟ ನಡೆಸಲಾಗುವುದು," ಎಂದು ಮಂಜುನಾಥ ಸುಣಗಾರ ಅವರು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

# ಸೆ.22 ರಿಂದ ಅನಿರ್ಧಿಷ್ಟಾವಧಿ ಮುಷ್ಕರ: ಭೈರಾಮಡಿ




■ **ಉದಯರಶ್ಮಿ ದಿನಪತ್ರಿಕೆ**

**ಚಡಚಣ ತಾಲೂಕು ಪೂರ್ಣ ಪ್ರಮಾಣದಲ್ಲಿ ಬರಗಾಲ ಘೋಷಣೆಗೆ ಹಸಿರು ಸೇನೆ ಆಗ್ರಹ**

ಚಡಚಣ: ತಾಲೂಕನ್ನು ಪೂರ್ಣ ಪ್ರಮಾಣದ ಬರಗಾಲ ಪೀಡಿತ ತಾಲೂಕು ಎಂದು ಘೋಷಿಸುವವರೆಗೂ ತಹಶೀಲದಾರ ಕಛೇರಿ ಎದುರು ಅನಿರ್ಧಿಷ್ಟಾವಧಿ ಮುಷ್ಕರ ನಡೆಸಲಾಗುವದು ಎಂದು ರಾಜ್ಯ ಹಸಿರು ಸೇನೆ ತಾಲೂಕಾಧ್ಯಕ್ಷ ವಸಂತ ಭೈರಾಮಡಿ ಹೇಳಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ರೈತರ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಇದೇ 22 ಮಂಗಳವಾರ ಪ್ರವಾಸಿ ಮಂದಿರದಿಂದ ಬ್ರಹತ್ ಪ್ರತಿಭಟನಾ ರ್ಯಾ ಲಿ ಮೂಲಕ ಬಸವೇಶ್ವರ ವೃತ್ತದಲ್ಲಿ ರಸ್ತೆ ತಡೆ ನಡೆಸಿ, ನಂತರ ತಹಶೀಲದಾರ ಕಛೇ-ರಿಗೆ ಮುತ್ತಿಗೆ ಹಾಕುವುದಾಗಿ ಹೇಳಿದ ಅವರು, ಚಡಚಣ ತಾಲೂಕನ್ನು ಈ ಮೊದಲು ಬರಗಾಲ ಪೀಡಿತ ತಾಲೂಕು ಎಂದು ಘೋಷಿಸಿದ 101 ತಾಲೂಕಗಳ ಪಟ್ಟಿಯಲ್ಲಿ ಚಡಚಣ ತಾಲೂಕನ್ನು ಪೂರ್ಣ ಪ್ರಮಾಣದ ಬರಗಾಲ ಪೀಡಿತ ತಾಲೂಕಾಗಿ 102ನೇ ತಾಲೂಕಾಗಿ ಘೋಷಣೆ ಮಾಡಬೇಕು ಹಾಗೂ ಚಡಚಣ ಏತ ನೀರಾವರಿ ಸಂಪೂರ್ಣ ಹಳ್ಳ ಹಿಡಿದಿದ್ದು, ಏತ ನೀರಾವರಿ ಕಾಮಗಾರಿಯನ್ನು ಸರಿಪಡಿಸಿ ಎಲ್ಲ ರೈತರ ಜಮೀನುಗಳಿಗೆ ನೀರು ಸರಬರಾಜಾಗುವಂತೆ ಮಾಡಬೇಕು, ತಾಲೂಕಿನ ಎಲ್ಲ ಕೆರೆಗಳನ್ನು ತುಂಬುವ ತನಕ ಅನಿರ್ದಾಷ್ಟವಧಿ ಧರಣಿ ನಡೆಸಲಾಗುವದು ಎಂದರು.

ಸಮಾಲೋಚನಾ ಸಭೆಯಲ್ಲಿ ಕರ್ನಾಟಕ ರೈತೋದಯದ ಜಿಲ್ಲಾ ಉಪಾಧ್ಯಕ್ಷ ನಾಗನಾಥಗೌಡ ಬಿರಾದಾರ, ಕರವೇ ವಲಯಾಧ್ಯಕ್ಷ ಸೋಮಶೇಖರ ಕಂಬಾರ, ಭೀಮ ಸೇನೆ ತಾಲೂಕಾಧ್ಯಕ್ಷ ರುದ್ರೇಶ ಬನಸೋಡೆ, ರೈತ ಮುಖಂಡರಾದ ಸಂತೋಷ ಭೈರಗೊಂಡ, ಫೇನಪ್ಪ ಬಿರಾದಾರ, ಉತ್ತಮ ಕಾರಬಾರಿ, ಹಣಮಂತ ಪೀರಗೊಂಡ, ಅಜೀತ ವಾಲಿ, ರಮೇಶ ಬಬಲಾದಿ, ಆಕಾಶ ಪಾಟೀಲ ಸೇರಿದಂತೆ ಮತ್ತಿತರ ರೈತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಇದ್ದರು.

# ವಿಬಿ ರಾಮಜಿ ಯೋಜನೆಯಿಂದ ಗ್ರಾಮೀಣರ ಜೀವನೋಪಾಯಕ್ಕೆ ಬಲ



■ **ಉದಯರಶ್ಮಿ ದಿನಪತ್ರಿಕೆ**

**ಬಬಲಾದ ಗ್ರಾಮದಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ ಅಭಿಮತ**

ಇಂಡಿ: ವಿಬಿ ರಾಮಜಿ ಯೋಜನೆಯಡಿ ದುಡಿಯುವ ಕೈಗಳಿಗೆ ಕೆಲಸ ಗ್ರಾಮೀಣ ಬದುಕಿಗೆ ಬಲ ನೀಡುವ ಜಾಬ್ ಕಾರ್ಡ ಹೊಂದಿರುವ ಪ್ರತಿ ಅರ್ಹ ಕುಟುಂಬಕ್ಕೆ 125 ದಿನಗಳ ಕೂಲಿ ಉದ್ಯೋಗ ಒದಗಿಸಲಾಗುತ್ತಿದ್ದು ಇದರ ಮೂಲಕ ಗ್ರಾಮೀಣ ಜನರ ಜೀವನೋಪಾಯಕ್ಕೆ ಮತ್ತಷ್ಟು ಬಲ ನೀಡಲಾಗುತ್ತಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ತಾಲೂಕಿನ ಬಬಲಾದ ಗ್ರಾಮದ ಪಂಚಾಯತ ವ್ಯಾಪ್ತಿಯ ಬಬಲಾದ ಗ್ರಾಮದ ಹೊರವಲಯದಲ್ಲಿ ವಿಬಿ ಜಿ ರಾಮಜಿ ಯೋಜನೆಯಡಿ ನಡೆಯುತ್ತಿರುವ ಅರಣ್ಯ ಪ್ರದೇಶದ ನೀರು ಇಂಗು ತೊಟ್ಟಿ ನಿರ್ಮಾಣ ಕಾಮಗಾರಿಗಳನ್ನು ಪರಿಶೀಲಿಸಿ ಮಾತನಾಡಿದರು.

ಕಾಮಗಾರಿಯಲ್ಲಿ ನಿರತರಾಗಿದ್ದ ಕೂಲಿಕಾರರ ಜೊತೆ ಸಂವಾದ ನಡೆಸಿ ಅವರ ಸಮಸ್ಯೆ ಆಲಿಸಿದರು.

ಇದೇ ವೇಳೆ ಕಾರ್ಮಿಕರೊಂದಿಗೆ ಶ್ರಮದಾನದಲ್ಲಿ ಪಾಲ್ಗೊಂಡು ಗ್ರಾಮೀಣ ಅಭಿವೃದ್ದಿಯಲ್ಲಿ ಜನರ ಸಹಭಾಗಿತ್ವ ಮಹತ್ವ ವಿವರಿಸಿದರು.

ತಾಪಂ ಇಒ ಮಹಾದೇವಪ್ಪ ಏವೂರ, ಸಹಾಯಕ ನಿರ್ದೇಶಕ ಸಂಜಯ ಖಡಗೇಕರ, ಪ್ರಕಾಶ ರಾಠೋಡ, ಸೋಮಣ್ಣ ಪ್ರಚಂಡಿ, ಪಿಡಿಒ ಸಿ.ಜಿ.ಪಾರೆ, ಗ್ರಾ.ಪಂ ಮಾಜಿ ಅಧ್ಯಕ್ಷ ರಮೇಶಗೌಡ ಬಿರಾದಾರ, ಮಲ್ಲು ಬೋಸಗಿ, ಕಾಮಣ್ಣ ದಶವಂತ, ಅಶೀಕಗೌಡ ಬಿರಾದಾರ, ಕ್ಷೇತ್ರಶಿಕ್ಷಣಾಧಿಕಾರಿ ಮೋಹನ ಕುಮಾರ ಬಳ್ಳೊಳ್ಳಿ ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ಬಿ.ಸಿ.ಸಾವಕಾರ, ಎ.ಸಿ.ಹುಣಸಗಿ ಮತ್ತಿತರಿದ್ದರು.

# ತಾಳಿಕೋಟೆ ಅಭಿವೃದ್ಧಿಗೆ ವಿಶೇಷ ಒತ್ತು : ಶಾಸಕ ನಾಡಗೌಡ

■ **ಉದಯರಶ್ಮಿ ದಿನಪತ್ರಿಕೆ**




ತಾಳಿಕೋಟೆ: ಪಟ್ಟಣದ ಅಭಿವೃದ್ಧಿಗೆ ಹೆಚ್ಚಿನ ಆದ-ೄತೆ ನೀಡುವುದು ನಮ್ಮೆಲ್ಲರ ಬದ್ಧತೆಯಾಗಿದೆ. ಪುರಸಭೆ ಸೇ-ರಿದಂತೆ ವಿವಿಧ ಇಲಾಖೆಗಳ ಮೂಲಕ ಪಟ್ಟಣ ಹಾಗೂ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾಮಗಾ-ರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕ ಸಿ.ಎಸ್. ನಾಡಗೌಡ ಹೇಳಿದರು.

ಲೋಕೋಪಯೋಗಿ ಇಲಾಖೆಯ ವತಿಯಿಂದ 2 ಕೋಟಿ ರೂ. ವೆಚ್ಚದಲ್ಲಿ ಸೇತುವೆ ಹಾಗೂ ಸಿಸಿ ರಸ್ತೆ ನಿರ್ಮಾಣ ಹಾಗೂ ಪುರಸಭೆ ಎಸ್‌ಎಫ್‌ಸಿ ವಿಶೇಷ ಅನುದಾನ 5 ಕೋಟಿ ರೂ. ವೆಚ್ಚದಲ್ಲಿ ಸಿ.ಸಿ.ರಸ್ತೆ ಅಭಿವೃದ್ಧಿ, 25 ಲಕ್ಷ ರೂ. ವೆಚ್ಚದಲ್ಲಿ ಉದ್ಯಾನವನ ಅಭಿವೃದ್ಧಿ, 1.16 ಕೋಟಿ ರೂ. ವೆಚ್ಚದಲ್ಲಿ ವಿವಿಧ ಬಡಾವಣೆಗಳಲ್ಲಿ ರಸ್ತೆ ಅಭಿವೃದ್ದಿ ಕಾಮಗಾ-ರಿಗೆ ಭೂಮಿ ಪೂಜೆ ನೆರವೇರಿಸಿ ನಂತರ ಶರಣಮುತ್ಯಾರ ಮಂದಿರ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ತಾಳಿಕೋಟೆ ಪಟ್ಟಣದ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಅಮೃತ ಯೋಜನೆಯಡಿ ಹಲವು ಹಂತಗಳಲ್ಲಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈಗಾಗಲೇ ಮಂಜೂರಾತಿ ದೊರೆತಿದೆ. ಅಮೃತ ಯೋಜನೆಯಡಿ ತಾಳಿಕೋಟೆಗೆ 24><7 ಕುಡಿಯುವ ನೀರು ಪೂರೈಕೆಗೆ ಅಗತ್ಯವಾದ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಿಸಲಾಗಿದೆ. ತಾಳಿಕೋಟೆಯಿಂದ ಮೂಕೀಹಾಳ ಕಡೆಗೆ ಸಾಗುವ ರಸ್ತೆಯ ಅಭಿವೃದ್ಧಿಯ ಜೊತೆಗೆ ಮಳೆಗಾಲದಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುತ್ತಿದ್ದ ಸೇತುವೆಯ ಕಾಮಗಾರಿಯನ್ನೂ ಪೂರ್ಣಗೊಳಿಸಲಾಗಿದೆ. ಮುಂದಿನದಿನಗಳಲ್ಲಿಸಾಸನೂರು-ದಿಂಡವಾರ ನಾಲತವಾಡ ರಸ್ತೆಯ ಅಭಿವೃದ್ಧಿ ಕಾಮಗಾ-ರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಇದಕ್ಕಾಗಿ 350 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಕ್ಷೇತ್ರದಲ್ಲಿ ರಸ್ತೆ, ಸೇತುವೆ, ನೀರಾವರಿ ಸೇ-ರಿದಂತೆ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಭೂಸ್ವಾಧೀನ ಸೇರಿದಂತೆ ಒಟ್ಟಾರೆ ಸುಮಾರು 380 ಕೋಟಿ ಮೊತ್ತದ ಯೋಜನೆಗಳ ಪ್ರಸ್ತಾವನೆಗಳು ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಹೇಳಿದರು.

ಈಸಮಯದಲ್ಲಿಕೆಪಿಸಿಸಿಸದಸ್ಯ ಬಿ.ಎಸ್.ಪಾಟೀಲ(ಯಾಳಗಿ), ಪ್ರಭುಗೌಡ ಮದರಕಲ್ಲ, ಸೈಯದ ಶಕೀಲ ಅಹ್ಮದ ಖಾಜಿ, ವ್ಹಿ.ಸಿ.ಹಿರೇಮಠ(ಹಂಪಿಮುತ್ಯಾ), ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಹಿಬೂಬ ಚೋರಗಸ್ತಿ, ಸಿದ್ದನಗೌಡ ಪಾಟೀಲ(ನಾವದಗಿ), ಪುರಸಭೆ ಮುಖ್ಯಾಧಿಕಾರಿ ಸುನಿಲ್ ಪಾಟೀಲ, ಚಿನ್ನುಧನಿ ನಾಡಗೌಡ, ಶರಣುಧನಿ ದೇಶಮುಖ, ಬಿ ಎನ್ ಹಿಪ್ಪರಗಿ, ಸಿ.ಎಸ್.ಮಾಳಿ, ವೀರೇಶಗೌಡ ಬಾಗೇವಾಡಿ, ಗುತ್ತಿಗೆದಾರ ಭೀಮನಗೌಡ ಪಾಟೀಲ, ಶಿವರಾಜ ಗುಂಡಕನಾಳ, ಸಂಗನಗೌಡ ಅಸ್ಕಿ, ಮಹಿಬೂಬ ಕೇಂಭಾವಿ, ಮುನ್ನಾ ಅರ್ಜುಣಗಿ, ಮೊದಲಾದವರು ಉಪಸ್ಥಿತರಿದ್ದರು.

# ಹಾಲಿ ಸಿಎಂ ಆಗಮನದ ಹೊತ್ತಿನಲ್ಲೇ ಮಾಜಿ ಸಿಎಂ ಮೂರ್ತಿ ತೆರವು

■ **ಉದಯರಶ್ಮಿ ದಿನಪತ್ರಿಕೆ**



**ಮಾಜಿ ಸಿಎಂ ಸಿದ್ಧರಾಮಯ್ಯ ಮೂರ್ತಿ ತೆರವಿಗೆ ಅಹಿಂದ ಸಮಾಜದ ಆಕ್ಷೇಪ । ಇದು ಅವಮಾನಿಸುವ ಪ್ರಯತ್ನವೆಂದ ಡಾ.ಕೊಳ್ಳೂರ**

ಕಲಬುರಗಿ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಕಲಬುರಗಿಗೆ ಆಗಮಿಸುವ ಹೊತ್ತಿನಲ್ಲೇ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂರ್ತಿಯನ್ನು ತೆರವುಗೊಳಿಸಿರುವ ಘಟನೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಈ ಕ್ರಮವನ್ನು ಅಹಿಂದ ಸಮಾಜ ಗಂಭೀರವಾಗಿ ಪರಿಗಣಿಸಲಿದೆ ಎಂದು ಮಾಶಾಳ ಗ್ರಾಮದ ಖ್ಯಾತ ವೈದ್ಯ ಡಾ. ಸಿದ್ದಾರ್ಥ್ ಕೊಳ್ಳೂರ್ ಅವರು ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

"ಸಿದ್ದರಾಮಯ್ಯಅವರುರಾಜ್ಯದಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದವರು. ಇಂತಹ ಹಿರಿಯ ರಾಜಕೀಯ ನಾಯಕರ ಮೂರ್ತಿಯನ್ನು ಮುಖ್ಯಮಂತ್ರಿ ನಗರಕ್ಕೆ ಬರುವ ಸಂದರ್ಭದಲ್ಲಿ ತೆರವುಗೊಳಿಸಿರುವುದು ಸಾಮಾನ್ಯ ಘಟನೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಈ ಬೆಳವಣಿಗೆ ಅವರ ಅಭಿಮಾನಿಗಳು ಹಾಗೂ ಅಹಿಂದ ಸಮುದಾಯದ ಭಾವನೆಗಳಿಗೆ ನೋವುಂಟು ಮಾಡುವಂತಿದೆ" ಎಂದು ಅವರು ಹೇಳಿದ್ದಾರೆ. "ಮೂರ್ತಿ ತೆರವುಗೊಳಿಸುವ ಹಿಂದೆ ನಿಜವಾದ ಕಾರಣವೇನು ಎಂಬುದನ್ನು ಜಿಲ್ಲಾಡಳಿತ ಸ್ಪಷ್ಟಪಡಿಸಬೇಕು. ಕಾನೂನು ಅಥವಾ ಆಡಳಿತಾತ್ಮಕ ಕಾರಣ ವಿದ್ದರೆ ಅದನ್ನು ಬಹಿರಂಗವಾಗಿ ಜನರಿಗೆ ತಿಳಿಸಲಿ. ಆದರೆ ಮುಖ್ಯಮಂತ್ರಿಗಳ ಕಾರ್ಯಕ್ರಮದ ಸಮಯಕ್ಕೆ ಸರಿಯಾಗಿ ಮೂರ್ತಿ ತೆರವುಗೊಳಿಸಿರುವುದರಿಂದ ಸಾರ್ವಜನಿಕರಲ್ಲಿ ಅನುಮಾನ ಮೂಡುವಂತಾಗಿದೆ" ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. "ಇದು ಕೇವಲ ಒಂದು ಮೂರ್ತಿಯ ಪ್ರಶ್ನೆಯಲ್ಲ; ಗೌರವ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆ. ಅಹಿಂದ ಸಮಾಜ ಇದನ್ನು ಗಂಭೀರವಾಗಿ ಪರಿಗಣಿಸುತ್ತದೆ. ಸರ್ಕಾರ ಹಾಗೂ ಜಿಲ್ಲಾಡಳಿತ ತಕ್ಷಣ ಸ್ಪಷ್ಟನೆ ನೀಡಬೇಕು. ಇಲ್ಲವಾದರೆ ಈ ವಿಚಾರದ ಕುರಿತು ಪ್ರಜಾಸತ್ತಾತ್ಮಕವಾಗಿ ಧ್ವನಿ ಎತ್ತಬೇಕಾಗುತ್ತದೆ" ಎಂದು ಡಾ. ಸಿದ್ದಾರ್ಥ್ ಕೊಳ್ಳೂರ್ ಎಚ್ಚರಿಕೆ ನೀಡಿದ್ದಾರೆ. "ಯಾವುದೇ ಮಹನೀಯರ ಪ್ರತಿಮೆ ತೆರವುಗೊಳಿಸುವ ಸಂದರ್ಭದಲ್ಲೂ ಪಾರದರ್ಶಕತೆ ಇರಬೇಕು. ರಾಜಕೀಯ ಭೇದಾಭಿಪ್ರಾಯಗಳ ಕಾರಣಕ್ಕೆ ಇಂತಹ ಕ್ರಮಗಳು ನಡೆಯಬಾರದು. ಜಿಲ್ಲಾಡಳಿತ ವಾಸ್ತವಾಂಶವನ್ನು ಜನರ ಮುಂದೆ ಇಡಬೇಕು" ಎಂದು ಡಾ.ಕೊಳ್ಳೂರ ಅವರು ಒತ್ತಾಯಿಸಿದ್ದಾರೆ.

# ಮೊಬೈಲ್ ಟಿವಿ ಬಿಟ್ಟು ಪುಸ್ತಕ ಹಿಡಿಯಿರಿ :ನಾರಾಯಣ ಶಾಸ್ತ್ರಿ

■ **ಉದಯರಶ್ಮಿ ದಿನಪತ್ರಿಕೆ**



ಬಾಗಲಕೋಟೆ (ಜಮಖಂಡಿ): ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿತಂದೆಯರೇ ಮೊದಲ ಗುರುಗಳು. ಹೀಗಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪಾಲಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಪಿ.ಎಂ.ಶ್ರೀ ಕರ್ನಾಟಕ ಪಬ್ಲಿಕ್ ಸ್ಕೂಲ್, ಕುಂಬಾರಹಳ್ಳದ ಮುಖ್ಯೋಪಾಧ್ಯಾಯ ನಾರಾಯಣ ಶಾಸ್ತ್ರಿ ಹೇಳಿದರು.

ಕುಂಬಾರಹಳ್ಳದ ಪಿ.ಎಂ.ಶ್ರೀ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪಾಲಕ-ರಿಗಾಗಿ ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿದ್ದು, ಪಾಲಕರು ಮಕ್ಕಳ ಅಧ್ಯಯನದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಟಿವಿ ಹಾಗೂ ಮೊಬೈಲ್ ಬಳಕೆಯನ್ನು ನಿಯಂತ್ರಿಸಿ, ಮಕ್ಕಳೊಂದಿಗೆ ಹೆಚ್ಚಿನ ಸಮಯ ಕಳೆಯಬೇಕು. ಮಕ್ಕಳ ಭವಿಷ್ಯದ ಬಗ್ಗೆ ಸದಾ ನಿಗಾ ವಹಿಸುವಂತೆ ಅವರು ಸಲಹೆ ನೀಡಿದರು.

ವರ್ಗ ಶಿಕ್ಷಕಿ ಸವಿತಾ ಬೆನಕಟ್ಟಿ ಅವರು ರೂಪಣಾತ್ಮಕ ಪರೀಕ್ಷೆಯ ಫಲಿತಾಂಶದ ವಿವರ ನೀಡಿದರು.

ಗಣಿತ ಶಿಕ್ಷಕ ಸಂಗನಬಸವ ಉಟಗಿ ಮಾತನಾಡಿ, "ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಮನಸ್ಸು ಮಾಡಿದರೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಯಶಸ್ಸು ಸಾಧಿಸಬಹುದು. ಮೊಬೈಲ್‌ಟಿವಿ ಬಿಟ್ಟು ಪುಸ್ತಕ ಹಿಡಿಯುವ ಅಭಿಯಾನ ಇಂದಿನಿಂದಲೇ ಆರಂಭವಾಗಲಿ" ಎಂದು ಕರೆ ನೀಡಿದರು.

ರಜಾ ದಿನಗಳಲ್ಲಿಯೂ ವಿದ್ಯಾರ್ಥಿಗಳಿಗಾಗಿ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಕುಂಬಾರಹಳ್ಳ ಶಾಲೆಯ ವಿದ್ಯಾರ್ಥಿಗಳು ಜಮಖಂಡಿಯ ಪ್ರತಿಷ್ಠಿತ ಕಾಲೇಜುಗಳಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಆಂಗ್ಲ ಭಾಷಾ ಶಿಕ್ಷಕ ಅಶೋಕ ಬಿರಾದಾರ ಪಾಟೀಲ, ವಿಜ್ಞಾನ ಶಿಕ್ಷಕಿ ಆಶೀಪಾ ಭಾನು ಮೋಮಿನ ಹಾಗೂ ಕನ್ನಡ ಶಿಕ್ಷಕಿ ಶಾರದಾ ಮಠ ಅವರು ವಿದ್ಯಾರ್ಥಿಗಳ ಅಧ್ಯಯನದ ಕುರಿತು ಸಲಹೆ ನೀಡಿದರು.

ಚಿತ್ರಕಲಾ ಶಿಕ್ಷಕ ಚಂದ್ರಕಾಂತ ಪೋಲಿಸ್ ಮಾತನಾಡಿ, "ಮಕ್ಕಳ ಮುಂದೆ ಪಾಲಕರು ಯಾವುದೇ ದುಶ್ಚಟಗಳಿಗೆ ಒಳಗಾಗಬಾರದು. ದುಶ್ಚಟದ ಸಾಮಗ್ರಿಗಳನ್ನು ಮಕ್ಕಳಿಂದ ತರಿಸಬಾರದು" ಎಂದು ಮನವಿ ಮಾಡಿದರು.

ಸಭೆಯಲ್ಲಿ ಎಸ್‌ಡಿಎಂಸಿ ಸದಸ್ಯರಾದ ಪದ್ಮವ್ವಾ ಹುದಲಿ, ಶೈಲಾ ಮಾಳಿ, ಅಪ್ಪಾಸಾಬ್ ನದಾಫ, ಹನಮಂತ ಮರನೂರ ಹಾಗೂ ಸದಾಶಿವ ಮಾಳಿ ಉಪಸ್ಥಿತ-ರಿದ್ದರು. 50ಕ್ಕೂ ಹೆಚ್ಚು ಪಾಲಕರು ಹಾಗೂ ತಾಯಂದಿರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಎರಡನೇ ರೂಪಣಾತ್ಮಕ ಪರೀಕ್ಷೆಯಲ್ಲಿ ಎಸ್‌ಎಸ್‌ಎಲ್‌ಸಿಯ 'ಅ' ಮತ್ತು 'ಬ' ವರ್ಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಶಿಕ್ಷಕರಾದ ಮಂಜುಳಾ ಕಡಕೋಳ, ಶಕುಂತಲಾ ಬಿರಾದಾರ, ಸಗರೆಪ್ಪ ಸೊನ್ನದ, ಸೌಜನ್ಯಾ ಬಾಳಿಗಿಡದ ಹಾಗೂ ಕರೆಪ್ಪ ವಾಜಂತ್ರಿ ಉಪಸ್ಥಿತರಿದ್ದರು. ಶಿಕ್ಷಕಿ ಶಾರದಾ ಮಠ ನಿರೂಪಿಸಿದರು. ಚಿತ್ರಕಲಾ ಶಿಕ್ಷಕ ಚಂದ್ರಕಾಂತ ಪೋಲಿಸ್ ವಂದಿಸಿದರು.

# ಸಿಂದಗಿಯಲ್ಲಿ ಯುವ ಮತದಾರರ ಮಿಂಚಿನ ನೋಂದಣಿ ಜಾಗೃತಿ

■ **ಉದಯರಶ್ಮಿ ದಿನಪತ್ರಿಕೆ**




ಸಿಂದಗಿ: ಇಂದಿನ ಯುವಕರು ನಾಳಿನ ಪ್ರಜೆಗಳು ಎಂಬಂತೆ 18 ವರ್ಷ ಪೂರ್ಣಗೊಂಡ ಪ್ರತಿಯೊಬ್ಬ ಮತದಾರರು ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಂಡು ತಮ್ಮ ರಾಜಕೀಯ ಹಕ್ಕು ಹಾಗೂ ಮತದಾನದ ಹಕ್ಕನ್ನು ಕಡ್ಡಾಯವಾಗಿ ಚಲಾಯಿಸಬೇಕೆಂದು ಆರ್ ಡಿ ಪಾಟೀಲ್ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಬಿ ಎಂ ಸಿಂಗನಹಳ್ಳಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪ್ರತಿಷ್ಠಿತ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಆರ್ ಡಿ ಪಾಟೀಲ್ ಪದವಿ ಪೂರ್ವ ಕಾಲೇಜಿನಲ್ಲಿ ಮತದಾರರ ಸಾಕ್ಷರತಾ ಸಂಘದ ಇ ಎಲ್ ಸಿ ವತಿಯಿಂದ ಆಯೋಜಿಸಿದ್ದ ಎಸ್‌ಐಆರ್ 2026 ಹಾಗೂ ಯುವ ಮತದಾರರ ಮಿಂಚಿನ ನೋಂದಣಿ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಮತದಾನವು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಅಂಗವಾಗಿದ್ದು ಕಾಲೇಜು ಹಂತದಲ್ಲಿಯೇ ವಿದ್ಯಾರ್ಥಿಗಳು ಮತದಾನದ ಮಹತ್ವ ಕುರಿತು ಚುನಾವಣಾ ಆಯೋಗದ ಸಂದೇಶದಂತೆ ಯಾರು ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು ಎಂದು ಆರ್ ಡಿ ಪಾಟೀಲ್ ಪದವಿಪೂರ್ವ ಕಾಲೇಜಿನ ಇ ಎಲ್ ಸಿ ನೋಡಲ್ ಅಧಿಕಾರಿ ಎನ್. ಬಿ. ಪೂಜಾರಿ ಪ್ರಾಸ್ತಾವಿಕವಾಗಿ ಹೇಳಿದರು. 18 ವರ್ಷ ಪೂರ್ಣಗೊಂಡ ಯುವಕರು ಇದರ ಸದುಪಯೋಗ ಪಡೆದುಕೊಂಡು ನಮೂನೆ -6 ಭರ್ತಿ ಮಾಡುವ ಮೂಲಕ ಸುಮಾರು 22 ವಿದ್ಯಾರ್ಥಿಗಳು ಈಸಿಐ ನೆಟ್ ಯಾಪ್ ಬಳಕೆ ಮಾಡಿಕೊಳ್ಳುವ ಮೂಲಕ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಿಕೊಳ್ಳಲು ನಮೂನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿಮಹಾವಿದ್ಯಾಲಯದಉಪನ್ಯಾಸಕಾದ ಡಾ. ಬಿ ಬಿ ಜಮಾದಾರ್, ಪಿ ವಿ ಮಹಲಿನ ಮಠ, ಎಸ್ ಎಚ್ ಜಾದವ್, ಗವಿಸಿದ್ದಪ್ಪ ಆನೆಗುಂದಿ, ಎಸ್ ಆರ್ ಬೂದಿಹಾಳ, ಎಸ್‌ಜಿ ಪಾಟೀಲ್, ಆರ್ ಎಂ ಕೊಲ್ಲೂರು, ರಾಹುಲ್ ಕುನ್ನಲ್ ಹಾಗೂ ಉದಯ ಶಿವಶಂಪಿಗೆರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಿ

## ಹಲಸಂಗಿಯಲ್ಲಿ ನಡೆದ ಪ್ರಜಾಸೇವಾ ಅಭಿಯಾನದಲ್ಲಿ ಶಾಸಕ ವಿಠ್ಠಲ ಕಟಕಧೋಂಡ ಕರೆ

■ **ಉದಯರಶ್ಮಿ ದಿನಪತ್ರಿಕೆ**




ಚಡಚಣ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕಧೋಂಡ ಹೇಳಿದರು.

ತಾಲೂಕಿನ ಹಲಸಂಗಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಆವರಣದಲ್ಲಿ ಶನಿವಾರ ನಡೆದ ಪ್ರಜಾಸೇವಾ ಅಭಿಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಪ್ರಜಾಸೇವಾ ಅಭಿಯಾನವು ಮುಖ್ಯಮಂತ್ರಿ ಅವರ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಭಾಗದ ಜನರ ಬಳಿಗೆ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ತೆರಳಿ, ಜನರ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಲು ಇದು ಉತ್ತಮ ವೇದಿಕೆಯಾಗಿದೆ. ಸರ್ಕಾರ ವಿಧಾನಸೌಧಕ್ಕೆ ಮಾತ್ರ ಸೀಮಿತವಾಗಿಲ್ಲ. ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಜನರ ಧ್ವನಿಯಾಗಿ ಕಾರ್ಯನಿರ್ವಹಿಸಬೇಕು. ಅಧಿಕಾರಿಗಳು ತಮ್ಮ ಅವಧಿಯಲ್ಲಿ ಜನರಿಗಾಗಿ ಏನು ಕೆಲಸ ಮಾಡಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದರು.

ತಾಪಂ ಇಒ ಅಶೋಕಕುಮಾರ ರಾಠೋಡ ಮಾತನಾಡಿ, ಸರ್ಕಾರದ ಯೋಜನೆಗಳು ಮತ್ತು ಸವಲತ್ತುಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಕಾರ್ಯಕ್ರಮ ನಡೆಸಲಾಗುತ್ತಿದೆ. ಸಾಕಷ್ಟು ಅಹವಾಲುಗಳು ಸಲ್ಲಿಕೆಯಾಗಿದ್ದು, ಅವುಗಳನ್ನು ಪರಿಶೀಲಿಸಿ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರವಿದಾಸ ಜಾಧವ, ಉಪತಹಸೀಲ್ದಾರ್ ಆರ್.ಎಸ್. ಚವ್ಹಾಣ, ಸಿಪಿಐ ಪರಶುರಾಮ ಮನಗೂಳಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಉಪಸ್ಥಿತರಿದ್ದರು.

**ಕುಂದುಕೊರತೆಗಳ ಸುರಿಮಳೆ**

ಹಲಸಂಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರು ಸಿಸಿ ರಸ್ತೆ, ಡಾಂಬರೀಕರಣ, ಚರಂಡಿ ವ್ಯವಸ್ಥೆ, ಶಿಥಿಲಗೊಂಡ ಶಾಲಾ ಕಟ್ಟಡಗಳ ದುರಸ್ತಿ, ವಿದ್ಯುತ್ ಸಮಸ್ಯೆ, ಕುಡಿಯುವ ನೀರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ರುದ್ರಭೂಮಿ, ಪಶುವೈದ್ಯಕೀಯ ಸೇವೆ ಹಾಗೂ ರೈತರಿಗೆ ಕಾಲುವೆ ನೀರನ್ನು ಕಾಲಕಾಲಕ್ಕೆ ಸಮರ್ಪಕವಾಗಿ ಪೂರೈಸುವಿಕೆ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಅಹವಾಲುಗಳನ್ನು ಸಲ್ಲಿಸಿದರು.

**ಪ್ರಮುಖ ಇಲಾಖೆಗಳ ಅಧಿಕಾರಿಗಳೇ ಗೈರು**

ಪ್ರಜಾಸೇವಾ ಅಭಿಯಾನದಂತಹ ಜನಸ್ಪಂದನಾ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆ, ಕೆಬಿಜೆಎನ್‌ಎಲ್ ಸೇರಿದಂತೆ ಹಲವು ಪ್ರಮುಖ ಇಲಾಖೆಗಳ ಅಧಿಕಾರಿಗಳು ಗೈರಾಗಿದ್ದರು. ಇದರಿಂದ ತಮ್ಮ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಪಡೆಯಲು ಬಂದಿದ್ದ ಸಾರ್ವಜನಿಕರಿಗೆ ನಿರಾಸೆಯಾಯಿತು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR